ಜನಪದ ಕಲ್ಯಾಣ

ಬೆಲೆ ೧೦-೦೦

ಚಿಂತನ * ದರ್ಶನ * ವಿಮರ್ಶನ

ಜನಪದ ಸೇವಾ ಟ್ರಸ್ಟ್ ಪ್ರಕಟಣೆ

ತಿಂಗಳ ವೈಚಾರಿಕ ಡೈಜೆಸ್ಟ್

ಸಂಪುಟ-೯ ಆಗಸ್ಟ್-೨೦೦೮ ಸಂಚಿಕೆ-೧



ಎತ್ತ ಸಾಗಿದೆ ಭಾರತ?

ಜನಪದ ವಿಚಾರದಲ್ಲಿ

ಜುಲೈ–೨೦೦೮

ಜನಪದ ವಿಚಾರ

ತಿಂಗಳ ವೈಚಾರಿಕ ಡೈಜಸ್ಟ್

ಆಗಸ್ಟ್ - ೨೦೦೮
ಸಂಪುಟ - ೯
ಸಂಚಿಕೆ - ೧

ಸಂಪಾದಕ
ಸುರೇಂದ್ರ ಕೌಲಗಿ

ಸಲಹಾ ಸಮಿತಿ
ಜನಪದ ಸೇವಾ ಟ್ರಸ್ಟ್
ಧರ್ಮದರ್ಶಿ ಮಂಡಳಿ

ಚಂದಾ ವಿವರ
ವಾರ್ಷಿಕ : ರೂ ೧೦೦/-
ಬಿಡಿ ಸಂಚಿಕೆ : ರೂ ೧೦/-

ಸಂಪರ್ಕ ವಿಳಾಸ
ಜನಪದ ಸೇವಾ ಟ್ರಸ್ಟ್(ರಿ)
ಮೇಲುಕೋಟೆ-೫೭೧೪೩೧
ಜಿಲ್ಲಾ ಮಂಡ್ಯ

☏ ೦೮೨೩೬ ೨೯೯೨೪೪
e-mail - janapada@yahoo.com

ಎಲ್ಲಿ ಹುಡುಕಲಿ ?

ಎಲ್ಲಿ ಹುಡುಕಲಿ
ಸಾಚಾ ಮನುಷ್ಯನನ್ನು
ಅರೆಗತ್ತಲೆ ಅರೆಬೆಳಕಿನ
ಬತ್ತಲೆ ಕತ್ತಲೆಯ ಬಾರಿನಲ್ಲೋ?
ದೇಶೀ ಮ್ಹಾಲಿನ ಪಡಖಾನೆಯಲ್ಲೋ?
ಹುಡುಕೋಣ ಬನ್ನಿ ಉತ್ತಮ ಸಂಭಾವಿತನ

ಎಲ್ಲಿ ಹುಡುಕಲಿ ಸಾಚಾ ದೇಶಭಕ್ತನ?
ಗಾಂಧೀಜಿಯ ಚಿತ್ರಪಟದೆದುರೆ?
ನೆಹರೂ ಸಮಾಧಿಯ ಬಳಿಯೇ?
ವಿಧಾನಸೌಧದ ಗಂಧದ ಮಾಲೆಗೆ
ಆರತಿಯೆತ್ತುವ ಧೂಪದ ನಡುವೆಯೆ?
ಹುಡುಕೋಣ ಬನ್ನಿ ಸಾಚಾ ಸತ್ಯವಂತನ

ಹುಡುಕುವ ಬನ್ನಿ ಕೇಳುವ ಬನ್ನಿ
ನೀತಿನಿಯಮದಲ್ಲಿ ಸತ್ಯಧರ್ಮದಲ್ಲಿ
ನಡೆದು ಈಗ ಮೂಲೆ ಸೇರಿದ
ತನ್ನ ಅಳಲನ್ನು ತಾನೇ ನುಂಗಿ
ಬಾಯಿ ತೆರೆಯಲು ಇಂಬಿಲ್ಲದೆ
ಎಲೆ ಮರೆಯ ಕಾಯಿಯಂತೆ
ಬದುಕುವ ಹಳೆಯ ಮನುಷ್ಯನ
ಹುಡುಕುವ ಬನ್ನಿ
ಕಣ್ಣ ತುಂಬ ನೋಡುವ ಬನ್ನಿ.

- ಸುನೀತಾ ಶೆಟ್ಟಿ

ವಿಚಾರ ದೀಪ್ತಿ

ನಾವು ವಾಸವಾಗಿರುವ ಈ ದೇಶದಲ್ಲಿ ದುಃಖವಿಲ್ಲ, ಕಾರ್ಪಣ್ಯವಿಲ್ಲ,
ಭ್ರಮೆಯಾಗಲಿ, ಸಂಕಟವಾಗಲಿ ಇಲ್ಲ. ಮೋಸವಾಗಲಿ,
ದುರಾಸೆಯಾಗಲಿ ಇಲ್ಲ.
ಪ್ರೇಮದ ಗಂಗೆ ಹರಿಯುತ್ತದೆ.
ಇಡೀ ಸೃಷ್ಟಿಯೇ ಸಂತೋಷಭರಿತವಾಗಿದೆ.
ಎಲ್ಲ ಮನಸ್ಸುಗಳು ಒಂದೇ ದಿಕ್ಕಿನತ್ತ ಹರಿಯುತ್ತವೆ.
ಸಮಯದ ಚಿಂತೆಗಾಗಿ ಅವಕಾಶವಿಲ್ಲ.
ಎಲ್ಲರ ಅಗತ್ಯಗಳು ನೆರವೇರುತ್ತವೆ.
ಇಲ್ಲಿಯ ವ್ಯವಹಾರವೆಲ್ಲವೂ ನ್ಯಾಯಬದ್ಧ.
ಇಲ್ಲಿ ಎಲ್ಲರ ಸ್ವಭಾವವೊಂದೆ.
ಅಭಾವವಾಗಲಿ, ಆರೈಕೆ ಇಲ್ಲದಾಗಲಿ ಇಲ್ಲ.
ಯಾವುದೇ ರೂಪದಲ್ಲಿ ಅಥವಾ ಆಕಾರದಲ್ಲಿ ಸ್ವಾರ್ಥವಿಲ್ಲ.
ಮೇಲಾಗಲಿ, ಕೀಳಾಗಲಿ, ಒಡೆಯನಾಗಲಿ, ಗುಲಾಮನಾಗಲಿ ಇಲ್ಲ.
ಎಲ್ಲವೂ ಪ್ರಜ್ವಲಿತ, ಆದರೂ ಉರಿಯುವ ಧಗೆ ಇಲ್ಲ.
ಈ ದೇಶ ನಿನ್ನಲ್ಲಿದೆ. ಅದು ಸ್ವರಾಜ್ಯ, ಸ್ವದೇಶಿ.
ನಿನ್ನಲ್ಲಿಯೇ ಇರುವ ಮನೆ.
ಜಯ! ಜಯ! ಜಯ!
ಯಾರು ಇದನ್ನು ಬಯಸುತ್ತಾರೊ ಅದನ್ನವರು ಪಡೆಯುತ್ತಾರೆ.

[೧೯೪೬ ಅಕ್ಟೋಬರ್ ೨ ಗಾಂಧೀಜಿಯವರ ೭೭ನೇ ಜನ್ಮದಿನೋತ್ಸವದಂದು ದಿಲ್ಲಿಯ ಭಂಗಿ ಕಾಲೋನಿಯಲ್ಲಿ ನಡೆದ ಸಮಾರಂಭದಲ್ಲಿ ಹಾಡಲಾದ ಹಿಂದಿ ಗೀತೆ. ಇದನ್ನು ಗಾಂಧೀಜಿಯವರು ಬಹುವಾಗಿ ಮೆಚ್ಚಿ ತಾವೇ ಇಂಗ್ಲಿಷಿಗೆ ಅನುವಾದಿಸಿ ಕ್ಯಾಬಿನೆಟ್ ಮಿಷನ್‌ನ ಸದಸ್ಯರಲ್ಲಿ ಒಬ್ಬರಾಗಿದ್ದ ಪೆಥಿಕ್ ಲಾರೆನ್ಸ್‌ರವರಿಗೆ ಕಳುಹಿಸಿಕೊಟ್ಟಿದ್ದರು.]

* * *

ಎತ್ತ ಸಾಗಿದೆ ಭಾರತ?

- ಸುರೇಂದ್ರ ಕೌಲಗಿ

ಆಡಾಡ್ತ ಆಯುಷ್ಯ
ನೋಡ ನೋಡ್ತ ದಿನಮಾನ,
ಕಳದ್ಹಾದ ಕಳದ್ಹಾದ ಕಳದ್ಹಾದ
ಕಾಣ್ಯಾದ ಕಡಲ್ಹಾದಿ ಹಿಡಿದ್ಯಾದ

- ಬೇಂದ್ರೆ

೨೦೦೮ ಜುಲೈ ೨೨ ಭಾರತದ ಹೊಸ ಹಣೆಬರಹವನ್ನು ಬರೆಯಲಾದ ದಿನ. ಆ ದಿನ ಸ್ವತಂತ್ರ ಭಾರತದ ಹದಿನಾಲ್ಕನೇ ಲೋಕಸಭೆಯು ಅಮೇರಿಕಾದೊಂದಿಗೆ ಅಣುಶಕ್ತಿಯ ಉತ್ಪಾದನೆಯ ಪರವಾಗಿ ತೀರ್ಮಾನ ಕೈಗೊಂಡಿತು. ಈ ತೀರ್ಮಾನಕ್ಕೆ ವಿರೋಧವಾಗಿದ್ದ ಒಟ್ಟು ಮತಗಳ ಸಂಖ್ಯೆಗಿಂತ ಕೇವಲ ಹತ್ತೊಂಭತ್ತು ಮತಗಳು ಪರವಾಗಿ ಇದ್ದವು. ಈ ಹತ್ತೊಂಭತ್ತು ಮತಗಳು ೧೦೫ ಕೋಟಿ ಜನಬಾಹುಳ್ಯದ ಅತಿ ಪ್ರಾಚೀನ ಸಂಸ್ಕೃತಿಯ ದೇಶದ ಭವಿಷ್ಯವನ್ನೇ ಸಂದಿಗ್ಧ ಸ್ಥಿತಿಗೆ ತಳ್ಳಿತು. ಮುಂದಿನ ವರ್ಷಗಳಲ್ಲಿ ಭಾರತ ತನ್ನ ಅಸ್ತಿತ್ವವನ್ನು ಉಳಿಸಿಕೊಂಡಿರುತ್ತದೋ ಇಲ್ಲವೊ ಎಂಬುದನ್ನು ಕಾಲವೇ ನಿರ್ಧರಿಸಬೇಕಾದ ಪರಿಸ್ಥಿತಿ ಉಂಟಾಯಿತು. ಯಾವುದೇ ಬಲಿಷ್ಠ ಸರ್ಕಾರದ, ಯಾವುದೇ ಬಲಿಷ್ಠ ನಾಯಕನ, ಯಾವುದೇ ಬಲಿಷ್ಠ ಜನಾಭಿಪ್ರಾಯಕ್ಕೂ ದಕ್ಕದ ಪರಿಸ್ಥಿತಿಯ ಹೊಸ್ತಿಲಿಗೆ ದೇಶ ಬಂದು ನಿಂತು ಕೊಂಡಿದೆ.

ಯಾವ ಪರಮಾಣು ಒಪ್ಪಂದದ ಬಗ್ಗೆ ಎಷ್ಟೆಲ್ಲ ಕೋಲಾಹಲ ಲೋಕಸಭೆಯಲ್ಲಿ ಆಯಿತೋ ಆ ವಿಷಯದ ವಿವರಗಳು ಮತ್ತು ಆ ವಿಷಯದ ಗಂಭೀರತೆ ಹಾಗೂ ಆ ವಿಷಯದ ಅನುಷ್ಠಾನದಿಂದ ಆಗುವ ಅಡ್ಡಪರಿಣಾಮಗಳು ಲೋಕಸಭೆಯ ಬಹುಪಾಲು ಸದಸ್ಯರ ತಿಳುವಳಿಕೆಗೆ ಬಂದಿಲ್ಲವೆಂಬುದು ಚಿಂತೆಗೆ ಕಾರಣವಾಗಿದೆ. ಇನ್ನು ಜನಸಾಮಾನ್ಯರಿಗಂತೂ ಆ ವಿಷಯ ಕಬ್ಬಿಣದ ಕಡಲೆಯೇ ಆಗಿದೆ. ಹೊಟ್ಟೆ-ಬಟ್ಟೆ ಚಿಂತೆಯೇ ಹಿಮಾಲಯ ಗಾತ್ರದಷ್ಟು ಆಗಿರುವಾಗ ಅಣುರೇಣುಗಳಂಥ ಚಿಕ್ಕ ವಿಷಯದ ಬಗ್ಗೆ ಅವರು ಹೇಗೆ ತಾನೆ ಯೋಚಿಸಬಲ್ಲರು? 'ಪಾಲಿಗೆ ಬಂದದ್ದು ಪಂಚಾಮೃತ', 'ಬಂದದ್ದೆಲ್ಲ ಬರಲಿ, ಭಗವಂತನ ದಯೆಯೊಂದಿರಲಿ' ಎಂಬಂಥ ದಾರ್ಶನಿಕರ ಮಾತು ಉಪಾಯಗಾಣದೆ ಅವರ ಬಾಯಿಂದ ಬರುವುದು ಸಹಜವೇ ಆಗಿದೆ.

೧೯೪೭ರಲ್ಲಿ ಆರು ದಶಕಗಳ ಹಿಂದೆ ದೇಶಕ್ಕೆ ಸ್ವಾತಂತ್ರ್ಯ ಬಂದಾಗ ಭಾರತೀಯರು ಹೊಂದಿದ್ದ ಜೀವನದ ಆಶೋತ್ತರಗಳು ಇಂದು ಭಗ್ನವಾಗಿವೆ.

ಭಾರತ ಸ್ವತಂತ್ರವಾದಾಗ ಅದು ತನ್ನನ್ನು ಎಲ್ಲ ಕ್ಷೇತ್ರಗಳಲ್ಲಿಯೂ ಸರ್ವಭೌಮವೆಂದು ಭಾವಿಸಿತ್ತು. ತನ್ನ ಸ್ವಾತಂತ್ರ್ಯಕ್ಕೆ ಯಾವುದೇ ಕಾರಣದಿಂದ ಅಪಾಯ ಒದಗುವ ಸಂದರ್ಭ ಬಂದಲ್ಲಿ ಅದನ್ನು ತಾನು ಬಲವಾಗಿ ಎದುರಿಸುವುದಾಗಿ ನಿಶ್ಚಯ ಮಾಡಿಕೊಂಡಿತ್ತು. ಆದರೆ ಜುಲೈ ೨೨ರಂದು ಸ್ವತಂತ್ರ ಭಾರತದ ೧೪ನೇ ಲೋಕಸಭೆಯು

ದೇಶವನ್ನು ಕವಿವಾಣಿಯಂತೆ ಕಾಣದ ಕಡಲ ಕಡೆಗೆ ಒಯ್ಯುವ ತೀರ್ಮಾನಕಯಗೊಂಡಿದೆ. ಅಣುಬಂಧದ ಒಪ್ಪಂದದಲ್ಲಿ ಕೇವಲ ಅಮೇರಿಕಾದೊಂದಿಗೆ ಮಾತ್ರ ಅಲ್ಲ ಇನ್ನೂ ನಲವತ್ತೈದು ದೇಶಗಳ ಜೊತೆಗೂ ಸಹಕಾರದ ಅವಕಾಶವಿದೆಯೆಂದು ಹೇಳಲಾಗುತ್ತಿದ್ದರೂ ಪ್ರಮುಖವಾಗಿ ಅಮೇರಿಕಾದ ಪ್ರಾಬಲ್ಯವೇ ಹೆಚ್ಚಾಗಿರುವುದೆಂದು ಬೇರೆ ಯಾರೂ ಹೇಳಬೇಕಾಗಿಲ್ಲ. ಅಲ್ಲದೆ, ಉಳಿದ ದೇಶಗಳೂ ಕೂಡ ಒಂದಲ್ಲ ಒಂದು ಅರ್ಥದಲ್ಲಿ ಸಾಮ್ರಾಜ್ಯಶಾಹಿ ಮನೋಭಾವವನ್ನೇ ಹೊಂದಿವೆ. ಅಣುಬಂಧ ಒಪ್ಪಂದದಲ್ಲಿ ಪಾಲ್ಗೊಳ್ಳುತ್ತಿರುವ ಎಲ್ಲ ದೇಶಗಳು ತಮ್ಮದೇ ಆದ ರಹಸ್ಯ ಉದ್ದೇಶ್ಯಗಳನ್ನು ಹೊಂದಿವೆ. ಸಮಯ ಸಿಕ್ಕರೆ ಇನ್ನೊಂದು ರಾಷ್ಟ್ರವನ್ನು ಬಲಿ ತೆಗೆದುಕೊಂಡು ತಾನು ಬಲಿಷ್ಠನಾಗಬೇಕೆಂಬ ಮಹತ್ವಾಕಾಂಕ್ಷೆಯನ್ನು ಹೊಂದಿವೆ. ಭಾರತ ತನ್ನ ಅಭಿವೃದ್ಧಿಯ ತಪ್ಪು ನೀತಿಯಿಂದಾಗಿ, ಪಾಶ್ಚಿಮಾತ್ಯರ ಅನುಕರಣೆಯ ಆಸೆಯಿಂದಾಗಿ; ಚೀನಾ ದೇಶವನ್ನು ಸೋಲಿಸಬೇಕೆಂಬ ಛಲದಿಂದಾಗಿ; ಪಾಕಿಸ್ತಾನವನ್ನು ಹಿಮ್ಮೆಟ್ಟಿಸಬೇಕೆಂಬ ಉದ್ದೇಶ್ಯದಿಂದಾಗಿ; ಜಗತ್ತಿನ ದೇಶಗಳ ಸಮೂಹದಲ್ಲಿ ತಾನು ಬಲಿಷ್ಠ ದೇಶವಾಗಿ ಹೊರಹೊಮ್ಮಬೇಕೆಂಬ ಭ್ರಮೆಯಿಂದಾಗಿ; ತಾನೊಂದು ಶ್ರೀಮಂತ ದೇಶವಾಗಿ ಬೆಳೆಯಬೇಕೆಂಬ ಕನಸಿನ ಕಾರಣದಿಂದಾಗಿ ಅಣುಬಂಧದ ಸಂಕೋಲೆಗೆ ತನ್ನನ್ನು ಬಂಧಿಸಿಕೊಳ್ಳುತ್ತಿದೆ. ಭಾರತ ಎತ್ತ ಸಾಗಿದೆ ಎಂಬ ಪ್ರಶ್ನೆಗೆ ಯಾರ ಬಳಿಯೂ ಉತ್ತರವಿಲ್ಲ. ಉತ್ತರ ಸಿಗುವ ಸಾಧ್ಯತೆಯೂ ಕಾಣುತ್ತಿಲ್ಲ.

* * *

ಸಂಗೀತ ಕಲಾವಿದರು – ೧೪

ಸಂತೂರ್ ವಾದಕ ಸತೀಶ್ ವ್ಯಾಸ್

ಸಂತೂರ್ ವಾದಕ ಸತೀಶ್ ವ್ಯಾಸ್‌ರವರು ವಿಶೇಷವಾದ ಸಂಗೀತ ಹಿನ್ನಲೆಯುಳ್ಳವರು. ಅವರಿಗೆ ತರಬೇತಿಯನ್ನು ಕೊಟ್ಟವರು ಗುರುಸ್ಥಾನದಲ್ಲಿದ್ದ ಅವರ ತಂದೆಯವರು. ವ್ಯಾಸ್‌ರವರು ಸಂತೂರ್ ವಾದ್ಯವನ್ನು ಏಕವ್ಯಕ್ತಿಯಾಗಿ ನುಡಿಸುವುದರಲ್ಲಿ ಮಹತ್ತರವಾದ ಕೀರ್ತಿಯನ್ನು ಸಂಪಾದಿಸಿದ್ದಾರೆ. ಅವರ ತಂದೆ ಪಂಡಿತ್ ಸಿ.ಆರ್. ವ್ಯಾಸ್‌ರವರು ಪದ್ಮಭೂಷಣ ಪ್ರಶಸ್ತಿಯಿಂದ ಅಲಂಕೃತರಾಗಿದ್ದರಲ್ಲದೆ ಭಾರತೀಯ ಸಂಗೀತ ಪರಂಪರೆಯಲ್ಲಿ ಬಹು ಗೌರವಾನ್ವಿತ ಹಾಗೂ ವಿದ್ವತ್‌ಪೂರ್ಣ ಗಾಯಕರಾಗಿದ್ದರು. ಅಂಥ ಸಂಗೀತಜ್ಞರು ಸತೀಶ್‌ರವರ ಮೊದಲ ಗುರುವಾಗಿದ್ದರು. ಈ ಅದೃಷ್ಟವಲ್ಲದೆ ಪದ್ಮವಿಭೂಷಣ ಪಂಡಿತ್ ಶಿವಕುಮಾರ್ ಶರ್ಮರವರ ಆತ್ಮೀಯ ಶಿಷ್ಯರಾಗುವ ಅದೃಷ್ಟವೂ ಅವರದಾಗಿತ್ತು. ಪಂಡಿತ್ ಶಿವಕುಮಾರ್‌ರವರು ಭಾರತೀಯ ಶಾಸ್ತ್ರೀಯ ಸಂತೂರ್ ವಾದಕರಾಗಿದ್ದರೆಂಬ ಸಂಗತಿಯನ್ನು ಮರೆಯುವಂತಿಲ್ಲ. ಸಂತೂರ್ ವಾದನಕ್ಕೂ ಪಂಡಿತ ಶಿವಕುಮಾರ್ ಶರ್ಮಾರವರಿಗೂ ಅಷ್ಟೊಂದು ನಿಕಟ ಸಂಬಂಧವಿತ್ತು. ಶ್ರೀ ವ್ಯಾಸ್‌ರವರು ಭಾರತ ಮತ್ತು ವಿದೇಶಗಳಲ್ಲಿ ಅನೇಕ ಕಡೆಗೆ ತಮ್ಮ ಪ್ರತಿಭೆಯನ್ನು ಮೆರೆದಿದ್ದಾರೆ. ಭಾರತ ಸರ್ಕಾರವು ೨೦೦೩ರಲ್ಲಿ ಅವರನ್ನು ಪದ್ಮಶ್ರೀ ಪದವಿಯಿಂದ ಸನ್ಮಾನಿಸಿದೆ

* * *.

ಇನ್ನು ಮುಂದೆ ಇಂಗ್ಲಿಷ್ ಎಲ್ಲರಿಗೂ ಬೇಡ

– ಕುವೆಂಪು

[ಭಾಷಾ ಕಲಿಕೆಯ ಇಂದಿನ ವಿವಾದದ ಸಂದರ್ಭದಲ್ಲಿ ಸಮಸ್ತ ಕರ್ನಾಟಕಸ್ಥರ ಅಭಿಪ್ರಾಯ ಈ ಲೇಖನದಲ್ಲಿ ಪಡಮೂಡಿದೆ.]

ಇಂದು ನಮ್ಮ ದೇಶದ ಮನಸ್ಸನ್ನು ಕುದಿಸುತ್ತಿರುವ ಸಮಸ್ಯೆಗಳಲ್ಲಿ ಭಾಷಾ ಸಮಸ್ಯೆಯೂ ಒಂದು ಪ್ರಮುಖಸ್ಥಾನ ಪಡೆದಿದೆ. ಪ್ರಾದೇಶಿಕ ದೃಷ್ಟಿಯಿಂದ, ಅಖಿಲ ಭಾರತೀಯ ದೃಷ್ಟಿಯಿಂದ, ಅಂತರರಾಷ್ಟ್ರೀಯ ದೃಷ್ಟಿಯಿಂದ, ಜ್ಞಾನಾರ್ಜನೆಯ ದೃಷ್ಟಿಯಿಂದ, ವಿದ್ಯಾಪ್ರಸಾರದ ದೃಷ್ಟಿಯಿಂದ, ಸಂಸ್ಕೃತಿಯ ದೃಷ್ಟಿಯಿಂದ, ನಾನಾ ದೃಷ್ಟಿಗಳಿಂದ ವಿವಿಧಾಭಿಪ್ರಾಯಗಳು ರಣರಂಗದಲ್ಲಿ ತುಮಲಯುದ್ಧ ಹೂಡಿದಂತಿವೆ. ಆಯಾ ಪ್ರದೇಶದ ದೇಶಭಾಷೆಗೆ ಅಲ್ಲಲ್ಲಿ ಪ್ರಾಧಾನ್ಯವಿರಬೇಕೆನ್ನುವವರು ಕೆಲವರು; ಅಖಿಲ ಭಾರತೀಯವೆಂದು ಒಪ್ಪಿಕೊಂಡಿರುವ ಸಂಯುಕ್ತಭಾಷೆಗೆ ಪ್ರಥಮ ಸ್ಥಾನವಿರಬೇಕು ಎನ್ನುವವರು ಕೆಲವರು. ಸರ್ವ ವಿದ್ಯಾಶಾಸ್ತ್ರಗಳಿಗೂ ಆಗರವಾಗಿ, ವ್ಯಾವಹಾರಿಕ ದೃಷ್ಟಿಯಿಂದಲೂ ಅಂತರಾಷ್ಟ್ರೀಯವಾಗಿರುವ ಇಂಗ್ಲಿಷ್ ಭಾಷೆಗೆ ಪ್ರಥಮ ಸ್ಥಾನವಿರಬೇಕೆಂದು ಕೆಲವರು.

ಈ ವಿಚಾರಮಂಥನ ನಿನ್ನೆಮೊನ್ನೆಯದಲ್ಲ. ಸ್ವಯಂ ಗಾಂಧೀಜಿಯೆ ಇವುಗಳನ್ನು ಕೂಲಂಕುಷವಾಗಿ ಚರ್ಚಿಸಿ, ತಮ್ಮ ನಿರ್ಧಾರಗಳನ್ನು ಸಕಾರಣವಾಗಿ ವಾದಿಸಿ, ನಾಡಿನ ಮುಂದೆ ಇಟ್ಟು ಹೋಗಿದ್ದಾರೆ. ಅಲ್ಲದೆ ದೇಶ ವಿದೇಶಗಳ ತಜ್ಞರೂ ಮನಃಶಾಸ್ತ್ರೀಯವಾಗಿ ಪರಿಶೀಲಿಸಿ ತಮ್ಮ ಸಿದ್ಧಾಂತಗಳನ್ನು ಮುಂದಿಟ್ಟಿದ್ದಾರೆ. ನಾಡಿನ ಅಗ್ರಗಣ್ಯ ದೇಶಭಕ್ತರೂ ತಮ್ಮ ನಿಷ್ಪಕ್ಷಪಾತವಾದ ನಿರ್ಣಯಗಳನ್ನು ಆಗಿಂದಾಗ್ಗೆ ಘೋಷಿಸುತ್ತಾ ಬಂದಿದ್ದಾರೆ. ಈ ವಿಚಾರವಾಗಿ ಇನ್ನು ಸಾಕು ಎಂಬಷ್ಟು ಚರ್ಚೆ ನಡೆದಿದೆ. ಈ ಸಮಸ್ಯೆ ವಾದ ಪ್ರತಿವಾದದ ಎಲ್ಲೆಯನ್ನು ದಾಟಿ ಇತ್ಯರ್ಥದ ಸೀಮೆಯನ್ನು ಮುಟ್ಟಿದೆ ಎಂದು ಹೇಳಬಹುದು.

ಒಟ್ಟಿನಲ್ಲಿ ಆ ಇತ್ಯರ್ಥವನ್ನು ಹೀಗೆ ವಿವರಿಸಬಹುದು. ಆಯಾ ಪ್ರಾಂತಗಳಲ್ಲಿ ಆಯಾ ಪ್ರಾದೇಶಿಕ ಭಾಷೆಗಳಿಗೆ ಪ್ರಥಮಸ್ಥಾನ ಸಲ್ಲಬೇಕು. ಅಂತರ ಪ್ರಾಂತೀಯ ವ್ಯವಹಾರ ದೃಷ್ಟಿಯಿಂದ ಮತ್ತು ಕೇಂದ್ರದ ಆಡಳಿತ ದೃಷ್ಟಿಯಿಂದ ಅಖಿಲ ಭಾರತೀಯವಾದ ಸಂಯುಕ್ತ ಭಾಷೆಗೆ ಎರಡನೆ ಸ್ಥಾನ ಕೊಡಬೇಕು. ಅಂತರರಾಷ್ಟ್ರೀಯವಾದ ಭಾಷೆಗೆ ಅಥವಾ ಭಾಷೆಗಳಿಗೆ ಐಚ್ಛಿಕ ಸ್ಥಾನ ಕೊಡಬೇಕು. ಆಯಾ ಪ್ರಾಂತಗಳಲ್ಲಿ ಆಯಾ ದೇಶಭಾಷೆಗಳೆ ಆಡಳಿತ ಭಾಷೆಗಳಾಗಿರಬೇಕು. ಅಲ್ಲಿಯ ಶಿಕ್ಷಣವೆಲ್ಲ ಎಲ್ಲ ಮಟ್ಟಗಳಲ್ಲಿಯೂ ದೇಶ ಭಾಷಾ ಮಾಧ್ಯಮದಲ್ಲಿಯೆ ಸಾಗಬೇಕು.

ಈ ಸ್ಥೂಲವಿವರಣೆ ಬಹುಜನ ಸಮ್ಮತವಾಗಿರುವುದರಲ್ಲಿ ಸಂದೇಹವಿಲ್ಲ.

ಆದರೆ ಭಾಷೆಗಳ ಸ್ಥಾನವನ್ನು ಹೀಗೆ ನಿರ್ಣಯಿಸುವಾಗ ಅನೇಕರು ತಪ್ಪು ಅಭಿಪ್ರಾಯಗಳ ದೆಸೆಯಿಂದ ಆತಂಕಗೊಳ್ಳುತ್ತಾರೆ. ಅದರಲ್ಲಿಯೂ ಇಂಗ್ಲಿಷನ್ನು ಚೆನ್ನಾಗಿ ಅಭ್ಯಾಸಮಾಡಿ ಅದರ ಸಾಹಿತ್ಯವನ್ನು ತಣಿಯುಂಡು ಸವಿದು, ಅದರ ವೈಭವಕ್ಕೂ

ವೈಶಾಲ್ಯಕ್ಕೂ ಮಾರುಹೋದವರಿಗೆ ಸಹಿಸಲಸಾಧ್ಯವಾದ ಸಂಕಟವಾಗುತ್ತದೆ. ಇಂಗ್ಲಿಷ್ ಭಾಷೆಯ ಮೂಲಕವೇ ತಮ್ಮ ಲೌಕಿಕ ಅಭ್ಯುದಯವನ್ನು ಸಾಧಿಸಿಕೊಂಡವರಿಗಂತೂ ಆ ಭಾಷೆಯಿಂದಲ್ಲದೆ ಬೇರೆ ಯಾವ ಭಾಷೆಯಿಂದಲೂ ಅಭ್ಯುದಯ ಸಾಧ್ಯವೇ ಇಲ್ಲ ಎಂಬಂತೆ ಭಾಸವಾಗುತ್ತದೆ. ನಮ್ಮ ಪ್ರಾಚೀನವಾದ ದೇಶಭಾಷೆಗಳ ಸಾಹಿತ್ಯದ ಅಥವಾ ಪ್ರಪ್ರಾಚೀನವಾದ ಸಂಸ್ಕೃತ ಸಾಹಿತ್ಯದ ವೈಭವ ವೈಶಾಲ್ಯಗಳ ಪರಿಚಯವಿಲ್ಲದೆ ಇರುವ ಇಂಗ್ಲಿಷ್ ವಿದ್ವಾಂಸರಿಗಂತೂ ಇಂಗ್ಲಿಷ್ ಭಾಷೆಯನ್ನು ಈ ಗಣ್ಯ ಸ್ಥಾನದಿಂದ ಅಲುಗಿಸಿದರೆ ಭರತಖಂಡವೆಲ್ಲ ಕಗ್ಗತ್ತಲೆಯಲ್ಲಿ ಅದ್ದಿ ಹೋಗುತ್ತದೆ ಎಂದೇ ನಂಬಿಕೆ. ಅಂಥವರ ಭಯಾಶಂಕೆಗಳ ಸಾಧಾರ ನಿರಾಧಾರ ಸತ್ಯಾಸತ್ಯತೆಗಳೇನೇ ಇರಲಿ ಅದರ ವಿಶ್ಲೇಷಣಕ್ಕೆ ಹೋಗದೆ, ಇನ್ನು ಮುಂದೆ ಇಂಗ್ಲಿಷಿಗೆ ಭಾಷಾದೃಷ್ಟಿಯಿಂದ, ಸಾಹಿತ್ಯದೃಷ್ಟಿಯಿಂದ ನಮ್ಮ ದೇಶದಲ್ಲಿ ಇರಬೇಕಾದ ಸ್ಥಾನವೇನು? ಅದು ಯಾವ ರೂಪದಲ್ಲಿ, ಯಾವ ಪ್ರಮಾಣದಲ್ಲಿ, ಎಷ್ಟರ ಮಟ್ಟಿಗೆ, ಎಷ್ಟು ಜನಕ್ಕೆ ಬೇಕಾಗುತ್ತದೆ, ಎಂಬೆಲ್ಲ ವಿಷಯಗಳನ್ನು ಕುರಿತು ಆಲೋಚಿಸುತ್ತೇವೆ.

ದೇಶಭಾಷೆಗೆ ಪ್ರಥಮಸ್ಥಾನ ಸಲ್ಲಬೇಕು. ದೇಶಭಾಷೆ ಶಿಕ್ಷಣ ಮಾಧ್ಯಮವಾಗಬೇಕು. ಎಂದೊಡನೆ ಕೆಲವರು ಇಂಗ್ಲಿಷ್ ಭಾಷಾಸಾಹಿತ್ಯಗಳಿಗೆ ಸಂಪೂರ್ಣ ಅರ್ಧಚಂದ್ರ ಪ್ರಯೋಗವಾಗಿಬಿಡುತ್ತದೆ ಎಂದು ವ್ಯಾಖ್ಯಾನಮಾಡಿ ದೇಶಭಾಷಾವಾದಿಗಳನ್ನು ಸ್ವಭಾಷಾಭ್ರಾಂತರೆಂದೂ ವಿದ್ಯಾಸಂಸ್ಕೃತಿ ವಿದ್ವೇಷಿಗಳೆಂದೂ ಸಂಕುಚಿತ ಮನೋಭಾವದವರೆಂದೂ ಟೀಕಿಸಿ ಖಂಡಿಸುತ್ತಾರೆ. ಇಂಗ್ಲಿಷ್ ಮೋಹಿಗಳ ಈ ಪ್ರಥಮಭ್ರಾಂತಿ ಮೊದಲು ನಿರಸನಗೊಳ್ಳಬೇಕು. ಇಂಗ್ಲಿಷ್ ಭಾಷೆಯ ಯೋಗ್ಯತೆ, ಅದರ ವ್ಯಾಪ್ತಿ, ಅದರಿಂದೊದಗುವ ಪ್ರಜ್ಞಾ ವೈಶಾಲ್ಯ, ಅದು ನಮ್ಮಲ್ಲಿ ಪ್ರಚೋದಿಸಿರುವ ವಿಚಾರಬುದ್ಧಿ, ಅದರಿಂದ ಮುಂದೆ ಎಂದೆಂದಿಗೂ ನಮಗೆ ಲಭಿಸಲಿರುವ ಸಂಪರ್ಕಸಹಾಯ ಮೊದಲಾದವುಗಳನ್ನೆಲ್ಲ ಅರಿತವರಾರೂ ಬ್ರಿಟಿಷ್‌ರನ್ನು ಓಡಿಸಿದಂತೆ ಇಂಗ್ಲಿಷ್ ಭಾಷೆಯನ್ನೂ ಓಡಿಸಬೇಕೆಂದು ಹೇಳುವ ಅವಿವೇಕಕ್ಕೆ ಹೋಗಲಾರರು. ಹಾಗೆ ಹೇಳುವವರನ್ನು ಪ್ರಚ್ಛನ್ನ ದೇಶದ್ರೋಹಿಗಳೆಂದು ಕರೆಯಬೇಕಾಗುತ್ತದೆ. ಆದ್ದರಿಂದ ಇಂಗ್ಲಿಷ್ ನಮ್ಮೊಡನೆ ಉಳಿಯಬೇಕೆಂಬುದರಲ್ಲಿ ಭಿನ್ನಾಭಿಪ್ರಾಯವಿರುವುದಕ್ಕೆ ಅವಕಾಶವೆ ಇಲ್ಲ.

ಇಂಗ್ಲಿಷ್ ಉಳಿಯಬೇಕೆಂದು ನಿಶ್ಚಯಿಸಿದಮೇಲೆ ನಮ್ಮ ಮಂದೆ ಏಳುವ ಪ್ರಶ್ನೆ: ಅದು ಯಾವ ರೂಪದಲ್ಲುಳಿಯಬೇಕು? ಯಾವ ಪ್ರಮಾಣದಲ್ಲಿ? ಯಾರಿಗೆ? ಏತಕ್ಕೆ? ಯಾವ ಉದ್ದೇಶಗಳಿಗಾಗಿ?

ಇಂಡಿಯಾಕ್ಕೆ ಇಂಗ್ಲಿಷ್ ಬಂದದ್ದು ಮುಖ್ಯವಾಗಿ ರಾಜಕೀಯ ಕಾರಣಗಳಿಂದಾಗಿ. ಅದನ್ನು ಅಧಿಕಾರಿಭಾಷೆಯೆಂದು ಘೋಷಿಸಿ ಕಡ್ಡಾಯವಾಗಿ ಅದನ್ನೆಲ್ಲರೂ ಕಲಿಯಬೇಕೆಂದು ವಿಧಿಸಿದುದೂ ಅದೇ ಕಾರಣಕ್ಕಾಗಿ. ಬಹು ಜನರು ನಮ್ಮ ದೇಶದಲ್ಲಿ ಇಂಗ್ಲಿಷನ್ನು ಕಲಿತುದಕ್ಕೆ ಕಾರಣವೂ ರಾಜಕೀಯವೆ. ಅಥವಾ ಅದರಿಂದ ಉದ್ಭವಿಸುವ ಆರ್ಥಿಕಾದಿ ಪ್ರಯೋಜನಕ್ಕಾಗಿ. ಅದನ್ನೀಗಲೂ ಬಯಸುವ ಬಳಸುವ

ಜನರಲ್ಲಿ ಬಹುಪಾಲು ಲೋಕೋಪಯೋಗ ದೃಷ್ಟಿಯನ್ನೇ ಹೊಂದಿರುತ್ತಾರೆ. ಆದರೆ ಈಗ ನಮ್ಮ ರಾಜಕೀಯ ಪರಿಸ್ಥಿತಿ ಬದಲಾಗಿದೆ. ಸ್ವತಂತ್ರ್ಯ ಭಾರತ ಬೇರೊಂದು ಭಾಷೆಯನ್ನು ತನ್ನ ಅಧಿಕಾರಿ ಭಾಷೆಯನ್ನಾಗಿ ಆರಿಸಿದೆ. ಈ ಹೊಸ ಪರಿಸ್ಥಿತಿಯಲ್ಲಿ ಇಂಗ್ಲಿಷಿಗೆ ಸಲ್ಲಬೇಕಾದ ಸ್ಥಾನ ಯಾವುದು? ಇಂಗ್ಲಿಷನ್ನು ಬಿಡುವಂತಿಲ್ಲ ; ಆದರೆ ಅದಕ್ಕೆ ಹಿಂದಿದ್ದ ಸ್ಥಾನವನ್ನು ಕೊಡುವಂತೆಯೂ ಇಲ್ಲ.

ಇನ್ನು ಮುಂದೆ ಇಂಗ್ಲಿಷ್ ಹಲವರು ಕಲಿಯುವ ಭಾಷೆಯಲ್ಲ ; ಕೆಲವರು ಕಲಿಯಬೇಕಾದ ಭಾಷೆ.

ಇನ್ನು ಮುಂದೆ ಅನೇಕರಿಗೆ ಬೇಕಾದ ಇಂಗ್ಲಿಷಿನ ಮಟ್ಟವೆಂದರೆ ಅದನ್ನೋದಿ ಅರ್ಥಮಾಡಿಕೊಳ್ಳುವಷ್ಟೆ ಹೊರತು ಅದರಲ್ಲಿ ಸಂಭಾಷಿಸುವುದಾಗಲಿ, ಭಾಷಣ ಮಾಡುವುದಾಗಲಿ, ಬರೆಯುವುದಾಗಲಿ ಅಲ್ಲ.

ಈ ದೃಷ್ಟಿಯಿಂದ ನಮ್ಮ ಅಧ್ಯಯನ ಕ್ರಮದಲ್ಲಿ ಅದಕ್ಕೆ ಗಾಂಧೀಜಿ ಕೊಟ್ಟಿರುವ ಐಚ್ಛಿಕ ಭಾಷಾಸ್ಥಾನವೆ ಯೋಗ್ಯವಾದದ್ದು. ಅದಕ್ಕೆ ಈಗ ಕೊಟ್ಟಿರುವ ಪ್ರಥಮ ಭಾಷಾಸ್ಥಾನ ದೇಶಕ್ಕೆ ಹಾನಿಕರ. ನಮ್ಮ ಬಾಲಕರ ಹಾಗೂ ತರುಣರ ಮನಶಕ್ತಿಯನ್ನೆಲ್ಲ ಅಪವ್ಯಯಗೊಳಿಸಿ, ಅವರನ್ನು ಪರೀಕ್ಷೆಗಳಲ್ಲಿ ಅನ್ಯಾಯವಾಗಿ ಅನುತ್ತೀರ್ಣರನ್ನಾಗಿ ಮಾಡುವುದರಿಂದ ಅವರ ಹೃದಯದ ಆಶಾಭಾವನೆಯನ್ನೆ ಮೊಳಕೆಯಲ್ಲಿಯೆ ಚಿವುಟಿಹಾಕಿ ನಿರಾಶೆಯನ್ನೂ ಅಧೈರ್ಯವನ್ನೂ ತಂದೊಡ್ಡಿ, ಅವರ ಬದುಕನ್ನೆ ಬಯಲುಗೊಳಿಸುವ ಸಾಧನೆಯಾಗಿದೆ ಈ ಪರಭಾಷೆ! ನಮ್ಮ ಮಕ್ಕಳು ತಮಗೆ 'ಸಹಜ'ವಾದ ನೆಲದ ನುಡಿಯನ್ನು ಕಲಿತು ಇನ್ನೇನು ಭಾಷೆಯಿಂದ ಭಾವಕ್ಕೂ ಜ್ಞಾನಕ್ಕೂ ರೆಕ್ಕೆಗೆದರಿ ಹಾರಬೇಕು ಎನ್ನುವಷ್ಟರಲ್ಲಿ ಈ ಹೊರಭಾಷೆಯ ಕಲ್ಲುಚಪ್ಪಡಿಯನ್ನು ಅವರ ತಲೆಗಳ ಮೇಲೆ ಹೇರುತ್ತೇವೆ! ಸರಿ, ಕನ್ನಡದಲ್ಲಿ ಕಲಿತುಬಿಟ್ಟಿದ್ದ ಬೆಕ್ಕು ಇಲಿ ಚಾಪೆ ಟೋಪಿಗಳನ್ನೆ ಮತ್ತೆ ಕ್ಯಾಟ್ ರ್‍ಯಾಟ್ ಮ್ಯಾಟ್ ಹ್ಯಾಟ್ ಎಂದು ತಮಗೆ ಅರ್ಥವಾಗದ ಸ್ಪೆಲ್ಲಿಂಗ್ ಸಹಿತವಾಗಿ ಬಾಯಿಪಾಠ ಮಾಡಬೇಕು! ಕನ್ನಡದಲ್ಲಿ ದೊಡ್ಡ ದೊಡ್ಡ ಹೊತ್ತಗೆಗಳನ್ನು ಉಲ್ಲಾಸದಿಂದ ಓದಿ, ಭಾವಕ್ಕೂ ಚಿಂತನಕ್ಕೂ ಕಣ್ಣರಳಿ ಎದೆಯರಳಿ, ಸಾಹಸಿಯಾಗಿ ಮುನ್ನುಗ್ಗಲೆಳಸುವ ಮಾಧ್ಯಮಿಕ ಶಾಲೆಯ ಬಾಲಕನ ಹಸುರು ಚೇತನ ಇಂಗ್ಲಿಷ್ ಭಾಷಾಬಂಡೆಗೆ ಮುಗ್ಗರಿಸಿ ಹಸರುಗಟ್ಟಿ ಉಸಿರುಗಟ್ಟಿ ಸೋತು ನಿಲ್ಲುವುದನ್ನು ಮಕ್ಕಳಿದ್ದು ಅವರ ಓದಿನ ಕಡೆಗೆ ಒಂದಿನಿತಾದರೂ ಗಮನ ಕೊಟ್ಟವರೆಲ್ಲರೂ ನೋಡಿಯೆ ಇರುತ್ತಾರೆ. ಅಲ್ಲದೆ ಹಳ್ಳಿಹಳ್ಳಿಗೂ ಹೈಸ್ಕೂಲುಗಳೇಳುತ್ತಿರುವ ಈ ಸಮಯದಲ್ಲಿ, ಅಲ್ಲಿ ಇಂಗ್ಲಿಷ್ ಪಾಠ ಹೇಳುವ ಬೋಧಕರ ಮಟ್ಟವೂ ತುಂಬ ಇಳಿದು ಹೋಗಿರುವುದರಿಂದಲೂ, ಬಾಲಕರ ಸಂಖ್ಯೆ ಮತ್ತು ಸಂಸ್ಕಾರ ವೈವಿಧ್ಯಗಳಲ್ಲಿ ಹಿಂದಣಕ್ಕಿಂತ ವಿಪುಲ ವ್ಯತ್ಯಾಸಗಳಾಗಿರುವುದರಿಂದಲೂ, ಮೊದಲಿನಂತೆ ಬೆಂಚಿನ ಮೇಲೆ ನಿಲ್ಲಿಸಿ, ಕಿವಿ ಹಿಂಡಿ, ಚಡಿ ಏಟುಕೊಟ್ಟು, ಘರಂಗಿಮಣೆ ಕೂರಿಸಿ, ಕಪಾಳಕ್ಕೆ ಬಿಗಿದು, ಬಾಯಿಪಾಠ ಮಾಡಿಸಿ, ವ್ಯಕ್ತಿ ವ್ಯಕ್ತಿಗೆ ಗಮನಕೊಡುವ ಇಂಡಿವಿಜುಯಲ್ ಅಟೆನ್‌ಷನ್ನಿನ ಕಸರತ್ತಿಗಾಗಲಿ ಕವಾಯತಿಗಾಗಲಿ ಈಗ ಅವಕಾಶವೆ ಇಲ್ಲ! ಹೀಗೆ ಪರೀಕ್ಷೆ

ಪರೀಕ್ಷೆಯಲ್ಲಿಯೂ ಒಂದೊಂದು ಮೆಟ್ಟಲಲ್ಲಿಯೂ 'ಕೃಪೆ'ಯೆ ರಟ್ಟೆ ಹಿಡಿದು ಎತ್ತಿ ಮೇಲಿನ ಮೆಟ್ಟಲಿಗೆ ಹಾಕಿದ ಹುಡುಗನ ಇಂಗ್ಲಿಷ್ ಜ್ಞಾನದ ದೋಣಿ ಹೇಗೊ ಕಾಲೇಜಿನ ಜಲಪಾತ ಪ್ರಪಾತದವರೆಗೂ ಸಾಗುತ್ತದೆ. ಅದುವರೆಗೂ ಏನೋ ಎಂತೋ ಅಂಕು ಡೊಂಕು ಹರಿವ ಹೊಳೆ ಪಾತ್ರವಾಗಿದ್ದ ಇಂಗ್ಲಿಷು ಬಾಲಕನ ಕಣ್ಣಿಗೆ ಇದ್ದಕ್ಕಿದ್ದಂತೆ ಪ್ರಪಾತಕ್ಕೆ ಧುಮುಕುವ ಜಲಪಾತವಾಗಿ ಪರಿಣಮಿಸುತ್ತದೆ. ಇನ್ನೇನು ಮಾಡುತ್ತಾನೆ ? ಪಾಪ, ಅದುವರೆಗೂ ತಾನು ಮಾಡುತ್ತಿದ್ದ ಅಲ್ಪ ಸ್ವಲ್ಪ ಪ್ರಯತ್ನದ ಹುಟ್ಟನ್ನೂ ಹೊಳೆಗೇ ಎಸೆದು, ಸುಮ್ಮನಾಗಿ, ದೋಣಿ ಮುಂಬರಿದು ತನಗೊದಗುವ 'ಗತಿಯ' ರುದ್ರರಮಣೀಯತೆಯ ರಸಾಸ್ವಾದನೆಯಲ್ಲಿ ತೊಡಗಬೇಕಾಗುತ್ತದೆ! ಅವನಿಗಿರುವ ಧೈರ್ಯ ಒಂದೇ ಒಂದು : ಈ ಅನಾಹುತದಲ್ಲಿ ತನ್ನೊಡನೆ ಸಮಪಾಲುಕೊಳ್ಳಲು ಒಡನಾಡಿಗಳು ಅಸಂಖ್ಯೇಯವಾಗಿದ್ದಾರೆ!

ದಡದಲ್ಲಿ ನಿಂತು ನೋಡುವ ಹಿರಿಯರ ಇತ್ಯರ್ಥವೇನು? ಹುಡುಗರೆಲ್ಲ ಈಚೀಚೆಗೆ ದಡ್ಡರಾಗುತ್ತಿದ್ದಾರೆ! ಸ್ಟಾಂಡರ್ಡ್ ತುಂಬ ಇಳಿದು ಹೋಗಿದೆ! ಹಾಗಾದರೆ ಏನು ಮಾಡಬೇಕು? ಇನ್ನಷ್ಟು ಇಂಗ್ಲಿಷ್ ಪಠ್ಯಪುಸ್ತಕ ಹೆಚ್ಚಿಸಿ! ಗ್ರಾಮರ್ ಲೇಹ್ಯ ಇನ್ನೂ ಸ್ವಲ್ಪ ಹೆಚ್ಚಾಗಿ ತಿನ್ನಿಸಿ! ಪರಿಣಾಮ : ಪರೀಕ್ಷೆಯ ಫಲಿತಾಂಶ ಪ್ರಕಟನೆ ಸಮಯದಲ್ಲಿ ಮತ್ತೆ 'ಕೃಪೆ'ಯೆ ಕೈ ಹಿಡಿದು ಎತ್ತಬೇಕು. ಮುಂದಿನ ಮೆಟ್ಟಲಿಗೆ.

ಈ ನಾಟಕ – ದುರಂತನಾಟಕ – ಇನ್ನು ಸಾಕು. ಇನ್ನು ಮುಂದೆ ಇಂಗ್ಲಿಷಿನ ಈ ನೀರುನೀರು ಸಮಾರಾಧನೆ ನಿಲ್ಲಬೇಕು. ಅದಕ್ಕೆ ಬದಲಾಗಿ ಆಯ್ದ ಕೆಲವರಿಗೆ ಮಾತ್ರ ಗಟ್ಟಿ ಇಂಗ್ಲಿಷಿನ ಪುಷ್ಟಿಯೊದಗುವಂತೆ ನಮ್ಮ ವಿದ್ಯಾಭ್ಯಾಸ ಕ್ರಮದಲ್ಲಿ ಭಾಷೆಗಳ ಸ್ಥಾನ ನಿರ್ಣಯವಾಗಬೇಕು. ಇನ್ನು ಮುಂದೆ ಇಂಗ್ಲಿಷ್ ಎಲ್ಲರಿಗೂ ಬೇಡ : ಹಲವರಿಗೆ ಕೊಂಚಮಟ್ಟಿಗೆ ಬೇಕು; ಕೆಲವರಿಗೆ ಮಾತ್ರ ಚೆನ್ನಾಗಿಯೇ ಬೇಕು.

ಇಂಗ್ಲಿಷ್ ಕಲಿಯುವವರನ್ನು ಎರಡು ವಿಭಾಗವಾಗಿ ವಿಂಗಡಿಸಬಹುದು ಭಾಷಾದೃಷ್ಟಿಯಿಂದ ಕಲಿಯುವವರು; ಸಾಹಿತ್ಯದೃಷ್ಟಿಯಿಂದ ಕಲಿಯುವವರು. ಭಾಷಾದೃಷ್ಟಿಯಿಂದ ಕಲಿಯುವವರಿಗೆ ಇಂಗ್ಲಿಷಿನ ಪರಿಚಯ ಚೆನ್ನಾಗಿ ಆಗಬೇಕು. ಅವರು ಆ ಭಾಷೆಯಲ್ಲಿ ಚೆನ್ನಾಗಿ ಓದಲೂ ಬರೆಯಲೂ ಮಾತನಾಡಲೂ ಭಾಷಣ ಮಾಡಲೂ ಬಲ್ಲವರಾಗಬೇಕು. ಅವರು ನಮಗೂ ಅಂತರರಾಷ್ಟ್ರೀಯ ಪ್ರಪಂಚಕ್ಕೂ ಸಾಹಿತ್ಯದಲ್ಲಿ, ಶಾಸ್ತ್ರದಲ್ಲಿ, ರಾಜಕೀಯದಲ್ಲಿ ಸಂಪರ್ಕ ಕಲ್ಪಿಸುವ ಸಾಧನಗಳಾಗಬೇಕು. ಇಂಥವರಿಗೆ ವಿದ್ಯಾಭ್ಯಾಸದ ಮೇಲಿನ ಮಟ್ಟದಲ್ಲಿ, ವಿಶೇಷವಾಗಿ ಸಾಹಿತ್ಯ ವಿಷಯಗಳಲ್ಲಿ, ಇಂಗ್ಲಿಷ್ ಶಿಕ್ಷಣ ಮಾಧ್ಯಮವಾಗಿದ್ದರೆ ಲೇಸು. ಏಕೆಂದರೆ ಅವರ ಉದ್ದೇಶವೇ ಆ ಭಾಷೆಯಲ್ಲಿ ಉದ್ದಾಮ ಪಾಂಡಿತ್ಯ ಸಂಪಾದನೆ.

ಆದರೆ ಇಂಗ್ಲಿಷನ್ನು ಆ ಭಾಷೆಯಲ್ಲಿರುವ ವಿಪುಲವಾದ ವಿವಿಧವಾದ ಶ್ರೀಮಂತವಾದ ಸಾಹಿತ್ಯಕ್ಕಾಗಿ ಅಭ್ಯಾಸ ಮಾಡುವವರ ವಿಷಯವೇ ಬೇರೆ. ಅವರಿಗೆ ಬೇಕಾದುದು ಭಾಷೆಯಲ್ಲ ; ಕಾವ್ಯ, ಸಾಹಿತ್ಯ. ಅಲ್ಲಿಯ ಕವಿಗಳು, ಅಲ್ಲಿಯ ನಾಟಕಕಾರರು,

ಅಲ್ಲಿಯ ತತ್ವಜ್ಞಾನಿಗಳು, ಅಲ್ಲಿಯ ರಾಜಕಾರಣಿಗಳು, ಸಹೃದಯರಿಗೆ ಜಿಜ್ಞಾಸುಗಳಿಗೆ ನೀಡುವ ರಸಾಂಶ, ಚಿಂತನಾಂಶ, ಸತ್ವ, ಇಂಗ್ಲಿಷನ್ನು ಅದರ ಸಾಹಿತ್ಯಕ್ಕಾಗಿ ಅಭ್ಯಾಸ ಮಾಡುವವರು ಆ ಭಾಷೆಯಲ್ಲಿ ಮಾತನಾಡುವುದನ್ನು ಅಭ್ಯಾಸ ಮಾಡಬೇಕಿಲ್ಲ ; ಅದರಲ್ಲಿ ಬರೆಯುವುದಕ್ಕೂ ಶ್ರಮಿಸಬೇಕಾಗಿಲ್ಲ ; ಅದನ್ನು ಓದಿ ಅರಿಯಬೇಕಾದುದೆಷ್ಟೊ ಅಷ್ಟೆ. ಆದ್ದರಿಂದ ಅವರು ಇಂಗ್ಲಿಷ್ ಸಾಹಿತ್ಯವನ್ನು ದೇಶಭಾಷಾ ಮಾಧ್ಯಮದ ಮೂಲಕವೆ ಅಭ್ಯಾಸಮಾಡಿದರೆ ಅದರ ರಸಸತ್ವ ಸುಲಭವಾಗಿ ಶೀಘ್ರವಾಗಿ ಜೀರ್ಣವಾಗಿ ರಕ್ತಗತವಾಗುತ್ತದೆ. ಎಲ್ಲ ದೇಶಗಳಲ್ಲಿಯೂ ಪರಭಾಷೆಯ ಸಾಹಿತ್ಯವನ್ನು ಸ್ವಭಾಷೆಯ ಮೂಲಕ ಕಲಿಯುವುದೇ ರೂಢಿ, ಸಹಜ ರೀತಿ. ಏಕೆಂದರೆ ಅವರ ಉದ್ದೇಶ ಆ ಪರಭಾಷೆಯಲ್ಲಿ ಬರೆಯುವ ಮಾತನಾಡುವ ಪಾಂಡಿತ್ಯ ಸಂಪಾದನೆಯಲ್ಲ, ಅದರ ಸಾಹಿತ್ಯದ ಸತ್ವದ ಆಸ್ವಾದನೆ ಮಾತ್ರ. ನಮ್ಮ ದೇಶದಲ್ಲಿ ಪರಕೀಯರ ಸೌಕರ್ಯಾರ್ಥವಾಗಿ ಆ ಭಾಷೆಯಲ್ಲಿ ಬರೆದು ಮಾತಾಡುವುದಕ್ಕಾಗಿಯೇ ನಮ್ಮ ವಿದ್ಯಾಭ್ಯಾಸ ಏರ್ಪಟ್ಟುದುದರಿಂದ ನಾವು ಪರಭಾಷಾ ಸಾಹಿತ್ಯವನ್ನು ಆ ಭಾಷಾ ಮಾಧ್ಯಮದಿಂದಲೇ ಕಲಿಯಬೇಕಾಯಿತು. ಮೊದಲಿನಿಂದಲೂ ಆ ಸಾಹಿತ್ಯವನ್ನು ನಮ್ಮ ಭಾಷೆಯ ಮಾಧ್ಯಮದಿಂದಲೇ ಕಲಿಸಿದ್ದರೆ ನಮ್ಮವರಿಗೆ ಈಗ ಒದಗಿರುವ ರಸಪುಷ್ಟಿಗಿಂತಲೂ ಸಾವಿರ ಪಾಲು ಹೆಚ್ಚಿನ ರಸಪುಷ್ಟಿ ಒದಗುತ್ತಿತ್ತು. ಪರಭಾಷಾ ಮಾಧ್ಯಮದಿಂದಲೆ ಕಲಿಯುವ ವಿಕಾರ ಪರಿಸ್ಥಿತಿ ಎಷ್ಟರಮಟ್ಟಿಗೆ ಮುಂದುವರಿದಿದೆಯೆಂದರೆ– ಷೇಕ್ಸ್‌ಪಿಯರ್, ಮಿಲ್ಟನ್, ವರ್ಡ್ಸ್‌ವರ್ತ್ ಮೊದಲಾದ ಕವಿಗಳ ಕೃತಿಗಳನ್ನು ಕನ್ನಡದ ಮೂಲಕ ಪಾಠ ಹೇಳಬಹುದೆಂಬ ಸಂಗತಿ ಇಂದಿಗೂ ಅನೇಕರಿಗೆ ದಿಗ್‌ಭ್ರಾಂತಿಕರ ವಿಸ್ಮಯವಾಗಿದೆ. ಆದರೆ ವಿಶ್ವವಿದ್ಯಾನಿಲಯಗಳಲ್ಲಿ ವಿದ್ಯಾರ್ಜನೆಮಾಡಿ, ಅಲ್ಲಿಯೆ ಅಧ್ಯಾಪಕರಾಗಿ ಸೇರಿ, ತಾವೇ ವಿದ್ಯಾರ್ಥಿಗಳಾಗಿಯೂ, ಅಧ್ಯಾಪಕರಾಗಿಯೂ, ವಿದ್ಯಾರ್ಥಿಗಳ ಇಂಗ್ಲಿಷ್ ಭಾಷಾ ಸಾಮರ್ಥ್ಯವನ್ನೂ, ಸಾಹಿತ್ಯ ರಸಾಸ್ವಾದನಾ ಶಕ್ತಿಯನ್ನೂ ಗಮನಿಸುತ್ತ ಬಂದವರಿಗೆ ನಿಜಸ್ಥಿತಿ ಚೆನ್ನಾಗಿ ಗೊತ್ತು. ಇಂಗ್ಲಿಷ್ ಭಾಷೆಯಲ್ಲಿ ತನ್ನ ಅಭಿಪ್ರಾಯಗಳನ್ನು ವ್ಯಕ್ತಗೊಳಿಸುವ ಶಕ್ತಿ ಏನೇನೂ ಇಲ್ಲದ ವಿದ್ಯಾರ್ಥಿಗೆ ಪರೀಕ್ಷೆಯಲ್ಲಿ ಮ್ಯಾಕ್‌ಬೆತ್ ಪಾತ್ರದ ವಿಚಾರವಾಗಿ ಪ್ರಬಂಧ ಬರೆಯುವ ಸಂಕಟ ಒದಗಿದರೆ ಏನುಮಾಡುತ್ತಾನೆ? ಪೂರ್ವಸಿದ್ಧತೆ ಮಾಡಿದ ಪ್ರಬಂಧವನ್ನು ಗಟ್ಟಿಮಾಡಿದ್ದರೆ ಅದನ್ನು ಉತ್ತರ ಪತ್ರಿಕೆಗೆ ಇಳಿಸಿ ತೇರ್ಗಡೆಹೊಂದುತ್ತಾನೆ. ಅಂತಹವನಿಗೆ ನಿಜವಾಗಿಯೂ ಷೇಕ್ಸ್‌ಪಿಯರ್ ನಾಟಕ ರಸಾಸ್ವಾದನೆಯಿಂದ ಅರಿವಾಗಿರುತ್ತದೆ ಎಂದು ಹೇಳಲಾಗುವುದಿಲ್ಲ. ಅದೇ ಇನ್ನೊಬ್ಬ ವಿದ್ಯಾರ್ಥಿಗೆ ಅದರ ಅರಿವು ಸ್ವಲ್ಪ ಮಟ್ಟಿಗೆ ಆಗಿದ್ದರೂ ಅದನ್ನು ಬರೆಯುವ ಭಾಷಾಸಾಮರ್ಥ್ಯವಿಲ್ಲದೆ ತಪ್ಪುತಪ್ಪಾಗಿ ಏನನ್ನೊ ಬರೆದು ಫೆಯಿಲ್ ಆಗುತ್ತಾನೆ. ತನ್ನ ಭಾಷೆಯಲ್ಲಿಯೆ ಉತ್ತರ ಬರೆಯುವ ಸ್ವಾತಂತ್ರ್ಯ ಅವನಿಗಿದ್ದಿದ್ದರೆ ಮ್ಯಾಕ್‌ಬೆತ್ ಪಾತ್ರವನ್ನು ಕುರಿತು ಚೆನ್ನಾಗಿಯೆ ಬರೆಯುತ್ತಿದ್ದನೆಂಬುದರಲ್ಲಿ ಸಂದೇಹವಿಲ್ಲ. ಈಚೀಚೆಗೆ ನಮ್ಮ ವಿಶ್ವವಿದ್ಯಾನಿಲಯಗಳಲ್ಲಿ ಭಾಷೇತರ ವಿಷಯಗಳಲ್ಲಿ ಮೊದಲಿಗಿಂತಲೂ ಸಮಧಿಕ ಪ್ರಮಾಣದಲ್ಲಿ ಅನುತ್ತೀರ್ಣರಾಗುತ್ತಿರುವುದಕ್ಕೆ ಮುಖ್ಯಕಾರಣ ಇಂಗ್ಲಿಷ್ ಭಾಷಾ ಮಾಧ್ಯಮವೇ ಹೊರತು ವಿಷಯಗಹನತೆಯೂ ಅಲ್ಲ, ವಿದ್ಯಾರ್ಥಿವರ್ಗದ

ಬುದ್ಧಿಶಕ್ತಿಯ ಸರ್ವತ್ರಾವನತಿಯೂ ಅಲ್ಲ. ಆದ್ದರಿಂದ ಇಂಗ್ಲಿಷನ್ನು ಅದರ ಸಾಹಿತ್ಯಕ್ಕಾಗಿ ಅಭ್ಯಾಸಮಾಡುವ ವಿದ್ಯಾರ್ಥಿಗಳಿಗೆ ಕನ್ನಡ ಮಾಧ್ಯಮದಲ್ಲಿಯೆ ಪಾಠ ಹೇಳಬೇಕು, ಪರೀಕ್ಷೆ ನಡೆಸಬೇಕು.

ಇಂಗ್ಲಿಷನ್ನು ಅದರ ಪ್ರಥಮ ಭಾಷಾಸ್ಥಾನದಿಂದ ಸದ್ಯಕ್ಕೆ ದ್ವಿತೀಯ ಸ್ಥಾನಕ್ಕೆ ಇಳಿಸಿ, ಕನ್ನಡವನ್ನು ಪ್ರಥಮ ಭಾಷಾಸ್ಥಾನಕ್ಕೆ ಏರಿಸಿ, ಪ್ರಥಮ ಭಾಷೆಯ ಮೂರು ಪ್ರಶ್ನೆ ಪತ್ರಿಕೆಗಳಲ್ಲಿ ಒಂದನ್ನು ಇಂಗ್ಲಿಷ್ ಸಾಹಿತ್ಯ ಎಂಬ ಹೆಸರಿನಲ್ಲಿ ಇಂಗ್ಲಿಷ್ ಸಾಹಿತ್ಯಕ್ಕೆ ಮೀಸಲಾಗಿರಿಸಿ, ಕನ್ನಡದಲ್ಲಿ ಪಾಠ ಹೇಳಿ, ಕನ್ನಡದಲ್ಲಿಯೆ ಉತ್ತರ ಬರೆಯುವಂತೆ ಮಾಡಿದರೆ, ನಮ್ಮ ಮಕ್ಕಳಿಗೆ ಇಂಗ್ಲಿಷ್ ಭಾಷೆಯ ಹೊರೆಯನ್ನು ತಪ್ಪಿಸುವುದರ ಜೊತೆಗೆ, ಇಂಗ್ಲಿಷ್ ಸಾಹಿತ್ಯದ ರಸಾಮೃತವನ್ನು ಪಾನ ಮಾಡಿಸಿದಂತಾಗಿ, ಅವರ ಪುಷ್ಟಿ ಈಗಿರುವುದಕ್ಕಿಂತಲೂ ನೂರ್ಮಡಿ ಹೆಚ್ಚುವುದರಲ್ಲಿ ಸಂದೇಹವಿಲ್ಲ.

ಇಂಗ್ಲಿಷ್ ಹೋದರೆ ಎಲ್ಲ ಕೊಚ್ಚಿಹೋಗುತ್ತದೆ ಎಂದು ಕೂಗಿಕೊಳ್ಳುವವರಿಗೆ ಇನ್ನೂ ಒಂದು ಸಮಾಧಾನ ಹೇಳಬೇಕಾಗುತ್ತದೆ. ಮೇಲೆ ವಿವರಿಸಿದಂತೆ, ಇಂಗ್ಲಿಷ್ ಸಂಪೂರ್ಣವಾಗಿ ಹೋಗುವುದಿಲ್ಲ. ಹಲವರಲ್ಲಿ ಸಾಹಿತ್ಯವಾಗಿ ಉಳಿದಿರುತ್ತದೆ. ಕೆಲವರಲ್ಲಿ ಭಾಷೆಯಾಗಿಯೂ ಉಳಿಯುತ್ತದೆ. ಅಲ್ಲದೆ ಇಂಗ್ಲಿಷ್ ಕಲಿಯುವ ಇತರ ಬಹು ಜನರಿಗೂ ಇಂಗ್ಲಿಷ್ ಅಲ್ಲದೆ ಇಂಗ್ಲಿಷ್ ಕಲಿಯದ ಇತರ ಬಹು ಜನರಿಗೂ ಇಂಗ್ಲಿಷ್ ಮೋಹಿಗಳು ಊಹಿಸುವಂತೆ ಯಾವ ತೆರನಾದ ಭಾವನಷ್ಟವಾಗಲಿ ಬುದ್ಧಿದಾರಿದ್ರ್ಯವಾಗಲಿ ಸಂಭವಿಸುವುದಿಲ್ಲ. ಏಕೆಂದರೆ ಕನ್ನಡದ ಈಗಿನ ಸ್ಥಿತಿ ಇಪ್ಪತ್ತಯ್ದು ಮೂವತ್ತು ವರ್ಷಗಳ ಹಿಂದೆ ಇದ್ದ ಸ್ಥಿತಿಯಲ್ಲ. ಈಗ ಇಂಗ್ಲಿಷ್ ಒಂದಕ್ಷರ ಬರದಿದ್ದವನೂ ಕೂಡ ಆಗ ಇಂಗ್ಲಿಷಿನ ಮೂಲಕವೇ ಪಡೆಯಬೇಕಾಗಿದ್ದ ಭಾವದ ಮತ್ತು ಬುದ್ಧಿಯ ಪುಷ್ಟಿಗಳನ್ನು ಕನ್ನಡದ ಮೂಲಕವೇ ಯಥೇಚ್ಛವಾಗಿ ಪಡೆಯುವಷ್ಟರ ಮಟ್ಟಿಗೆ ಕನ್ನಡ ವಾಙ್ಮಯ ಸಾಹಿತ್ಯದ ಮತ್ತು ಶಾಸ್ತ್ರದ ವಿವಿಧ ಶಾಖೆಗಳಲ್ಲಿ ಮುಂಬರಿದಿದೆ ; ದಿನದಿನಕ್ಕೂ ಬೆಳೆದು ಪ್ರಗತಿ ಹೊಂದುತ್ತಿದೆ. ಅಷ್ಟೇ ಅಲ್ಲ, ಇಂಗ್ಲಿಷ್ ಸಾಹಿತ್ಯವನ್ನೂ ಆಮೂಲಾಗ್ರವಾಗಿ ಓದಿದವರೂ ಬೆಕ್ಕಸಪಡುವಂತಹ ಸಾಹಿತ್ಯ ಶೃಂಗಗಳೂ ಕನ್ನಡದಲ್ಲಿ ಕೆಲವಾದರೂ ಮೂಡಿವೆ. ಹಿಂದಿನ ಮತ್ತು ಇಂದಿನ ಕನ್ನಡ ಸಾಹಿತ್ಯದ ರಸಸಾಗರದಲ್ಲಿ ಮುಳುಗಿದವನು ತಾನು ಇಲ್ಲಿ ಅನುಭವಿಸದಿದ್ದ ಅಥವಾ ಅನುಭವಿಸಲಾರದಿದ್ದ ಯಾವ ನೂತನತೆಯನ್ನಾಗಲಿ ರಸೋನ್ನೇಷವನ್ನಾಗಲಿ ಅಲ್ಲಿ ಕಂಡು ಕರುಬುವ ಪರಿಸ್ಥಿತಿಯಿಂದ ನಾವು ಬಹುದೂರ ಮುಂದುವರಿದಿದ್ದೇವೆ. ತಾವು ವಿದ್ಯಾರ್ಥಿಗಳಾಗಿದ್ದಾಗ ಓದಿದ್ದ ಅಥವಾ ಶಾಲಾ ಕಾಲೇಜುಗಳಲ್ಲಿ ಕಡಿಮೆ ಸಂಬಳದ ಬಡ ಉಪಧ್ಯಾಯರಿಂದ ಪಾಠ ಕೇಳಿದ್ದ ಅಂತಸ್ತಿನಲ್ಲಿಯೆ ಕನ್ನಡ ಈಗಲೂ ಇದೆ ಎಂದು ಭ್ರಮಿಸಿರುವ ರಾಜ್ಯ ಲಲಾಟ ಲೇಖನ ನೌಕೆಯ ಕರ್ಣಧಾರರಾಗಿರುವ ವಯಸ್ಕ ಮಹನೀಯರು ಮಾತ್ರ ಕನ್ನಡ ಶಕ್ತಿಯ ವಿಚಾರವಾಗಿ ಶಂಕಿಸಬಹುದೆ ವಿನಾ ಉಳಿದ ತಿಳಿದವರಾರೂ ಶಂಕಿಸರು.

(ಸಾಭಾರ : ಕುವೆಂಪು ಸಮಗ್ರ ಗದ್ಯ – ಸಂಪುಟ ೨)

* * *

ಸಿದ್ದವನಹಳ್ಳಿ ಕೃಷ್ಣಶರ್ಮ
ಆಕಾರದಲ್ಲಿ ವಾಮನ ಸಾಹಿತ್ಯದಲ್ಲಿ ತ್ರಿವಿಕ್ರಮ

– ನೀಲತ್ತಹಳ್ಳಿ ಕಸ್ತೂರಿ

[ಕೃಷ್ಣಶರ್ಮರ ಜುಲೈ ೪ರ ಜನ್ಮದಿನೋತ್ಸವದ ನೆನಪಿನಲ್ಲಿ ಈ ಲೇಖನ]

ಜುಲೈ ೨೩. ೧೯೭೩ ಭಾನುವಾರ, ಗ್ರೀಷ್ಮ ಋತುವಿನ ತಂಪು ಬೆಳಿಗ್ಗೆ. ಬೆಂಗಳೂರಿನ ಕನ್ನಡ ಸಾಹಿತ್ಯ ಪರಿಷತ್ತಿನ ಸಭಾಂಗಣದಲ್ಲಿ ಒಂದು ಗಂಭೀರ ಸಭೆ. ನೆರೆದಿದ್ದವರು ಸಾಹಿತಿಗಳು, ರಾಜಕಾರಣಿಗಳು, ಪತ್ರಿಕೋದ್ಯೋಗಿಗಳು ಸರ್ವೋದಯ ಕಾರ್ಯಕರ್ತರು. ಯುವಜನರು ಎಲ್ಲರೂ.

ಅಂದು ಕನ್ನಡದ ವಿಶಿಷ್ಟ ಸಾಹಿತಿಯೊಬ್ಬರಿಗೆ ಅಭಿನಂದನ ಸಮಾರಂಭ. ಸನ್ಮಾನ ಅಭಿನಂದನಗಳು ಸಾಮಾನ್ಯವಾಗಿ ಬೆಂಗಳೂರಿನ ಪುರಭವನದಂಥ ಕಡೆ ನಡೆಯುವುದು ವಾಡಿಕೆ. ಆದರೆ ಈ ಸನ್ಮಾನ ನಡೆದದ್ದು ಸಾಹಿತ್ಯ ಪರಿಷತ್ತಿನಲ್ಲಿ. ಪರಿಷತ್ತೂ ಒಮ್ಮೆ ಆ ಸನ್ಮಾನಿತರ ಕರ್ಮಕ್ಷೇತ್ರ ಆಗಿತ್ತು.

ವೇದಿಕೆಯ ಮೇಲೆ ಇದ್ದವರು "ಅನೇಕ ರೀತಿಗಳಲ್ಲಿ ಕನ್ನಡದ ಕಿರಿಯರಿಗೆ ದೊಡ್ಡ ನಿಧಿ ಆದ ಡಾ॥ ಮಾಸ್ತಿ ಅವರು. ಅವರು ಮುನ್ನುಡಿಯ ಕುಂಕುಮವನ್ನು ಇಟ್ಟರೆ ಕಾವ್ಯಕನ್ಯೆ ದೀರ್ಘ ಸುಮಂಗಲಿಯಾಗುತ್ತಾಳೆ. ಆ ಕೈಗುಣ ಅವರಲ್ಲಿದೆ, ಆ ಹರಕೆ ಹಿರಿಯ ಮನಸ್ಸಿನದು" ಎಂದು 'ಪರ್ಣಕುಟಿ' ಗ್ರಂಥದಲ್ಲಿ ಲೇಖಕರು ಮುನ್ನುಡಿಗಾಗಿ ಮಾಸ್ತಿಯವರನ್ನು ನಮಿಸಿಲ್ಲವೇ? ಅದೇ ಮಾಸ್ತಿಯವರದೇ ಹಿರಿತನ ಇಂದಿನ ಸಭೆಗೆ. ಸನ್ಮಾನಿತರ ಬಗ್ಗೆ ಹೊರತರಲಾದ 'ಸಿದ್ಧಹಸ್ತ' ಗ್ರಂಥ ಪ್ರಕಾಶನ ಅಂದಿನ ಶಿಕ್ಷಣ ಮಂತ್ರಿ ಶ್ರೀ ಎ. ಆರ್. ಬದರಿನಾರಾಯಣ ಅವರಿಂದ. ಇನ್ನು ಭಾಷಣಕಾರರು, ಸನ್ಮಾನಿತರ ಎಳೆತನದಲ್ಲಿ ಗೆಳೆಯರ ಗುಂಪಿನಲ್ಲಿ ಜೊತೆಗಾರ ಗೆಳೆಯ ಆಗಿದ್ದ ಡಾ॥ ವಿ.ಕೃ. ಗೋಕಾಕರು, ಬಹುಕಾಲದಿಂದಲೂ ಬಳೇಪೇಟೆಯಲ್ಲಿ ಸನ್ಮಾನಿತರನ್ನು ಕಂಡು, ಮಾತು ಕತೆ ಚರ್ಚೆ, ಉಪಚಾರಗಳಿಂದ ಹೃದಯಕ್ಕೆ ಹತ್ತಿರದವರಾಗಿದ್ದ ಡಾ॥ ಶಿವರಾಂ, ನಾಡಿನ ಹಿರಿಯ ಕವಿ, ವಿಚಾರವಂತ, ಆತ್ಮೀಯರಾದ ವಿ.ಸೀತಾರಾಮಯ್ಯ, ಸನ್ಮಾನಿತರು ಯಾವ ಆದರ್ಶಗಳನ್ನು ಕಟ್ಟಿಕೊಂಡು ಬಾಳಿದರೋ ಅದೇ ಸರಳತೆ, ಸೇವಾಪ್ರಿಯತೆ ಮುಂತಾದ ಮೌಲ್ಯಗಳನ್ನು ನೆಮ್ಮಿ ಉನ್ನತ ಸ್ಥಾನದಲ್ಲಿ ಇದ್ದರೂ ಎಂದಿನಂತೆಯೇ ಸಹಜತೆಯಿಂದಿರುವ ಡಾ॥ ಹೆಚ್.ನರಸಿಂಹಯ್ಯ, ಸನ್ಮಾನಿತರ ಸೇವೆ ಸಂದ ಸಾಹಿತ್ಯ ಪರಿಷತ್ತಿನ ಕೆಲಸವನ್ನು ನೂರು ಮಡಿ ಸಾವಿರ ಮಡಿ ಹರಡುತ್ತಲಿರುವ ಪರಿಷತ್ ಅಧ್ಯಕ್ಷ ಶ್ರೀ ಜಿ. ನಾರಾಯಣ, ಎಲ್ಲರೂ ಸನ್ಮಾನಿತರನ್ನು ಹತ್ತಿರದಿಂದ ಕಂಡವರು, ಬಲ್ಲವರು. ವೇದಿಕೆಯ ಮೇಲೆ ಇಷ್ಟು ಜನರೊಂದಿಗೆ ಕುಳಿತಿದ್ದ ಇನ್ನೊಬ್ಬ ಹಿರಿಯರು ತಿರುಮಲೆ ತಾತಾಚಾರ್ಯ ಶರ್ಮ. ಸಂಭಾವನಾ ಗ್ರಂಥದ ಸಂಪಾದಕರು.

ಆದರೆ,

ಸನ್ಮಾನಿತರೆಲ್ಲಿ? ವರನೇ ಇಲ್ಲದೆ ವರಪೂಜೆಯೇ?

ಹೌದು ಹಾಗೆಯೇ ಆಗಿತ್ತು. ಸನ್ಮಾನಿತರು ಬಂದಿರಲಿಲ್ಲ. ಅವರ ಚಿತ್ರಪಟ ಒಂದು ವೇದಿಕೆಯ ಮೇಲೆ ಇತ್ತಷ್ಟೆ.

ಅಂದು ನಡೆದ ಸನ್ಮಾನ, ಅಭಿನಂದನ ಸಿದ್ದವನಹಳ್ಳಿ ಕೃಷ್ಣಶರ್ಮ ಅವರಿಗೆ. ಏರ್ಪಡಿಸಿದ್ದವರು ಬೆಂಗಳೂರಿನ ಹಂಸಧ್ವನಿ ಪ್ರಕಾಶನ ಸಂಸ್ಥೆಯ ಶ್ರೀ ಸು. ರಂಗಸ್ವಾಮಿ. ಶರ್ಮರು ಸನ್ಮಾನಕ್ಕೆ ಬಂದಿರಲಿಲ್ಲ. ಬರುವ ಸ್ಥಿತಿಯಲ್ಲಿ ಇರಲಿಲ್ಲ. ಮನೆಯಲ್ಲೇ ಶಯ್ಯಾಬಂಧಿತರಾಗಿದ್ದರು. "ನಲವತ್ತು ವರ್ಷ ನಾಡಲ್ಲೆಲ್ಲ ಮಿಂಚಿನಂತೆ ಓಡಾಡಿ ದುಡಿದ ಜೀವ, ನರದೌರ್ಬಲ್ಯಕ್ಕೆ ತುತ್ತಾಗಿ ನೆಲಕಚ್ಚಿ ಕುಳಿತು ನಾಲ್ಕು ವರ್ಷ ಆಯಿತು. ಹಿಂದೆ ಶರ್ಮಾಜಿಯವರನ್ನು ಕಂಡವರಿಗೆ ಇಂದು ಅವರನ್ನು ಕಾಣುವುದು ಕಷ್ಟದ ಕೆಲಸ. ಅಷ್ಟು ಕುಗ್ಗಿದ್ದಾರೆ"– ಸ್ವಾಗತದ ಮಾತಿನಲ್ಲಿ ಇದನ್ನು ಹೇಳುವಾಗ ನನ್ನ ಗಂಟಲು ಕಟ್ಟಿತ್ತು. ಹೀಗೆ ಆದೀತೆಂಬ ಶಂಕೆಯೂ ಮೊದಲೇ ನನ್ನಲ್ಲಿ ಇತ್ತು. ಮೊದಲಿನ ನಾಲ್ಕಾರು ಸ್ವಾಗತದ ಮಾತನ್ನೆಲ್ಲಾ ಹೇಗೋ ನಿಭಾಯಿಸಿದ್ದೆ. ಈ ಮಾತು ಬಂದಾಗ ನನ್ನ ಸ್ಥಿರತೆ ಕುಸಿಯಿತು. ಕಣ್ಣು ಮಂಜಾಯಿತು. ಆದರೂ ಅವರೇ ನಮಗೆಲ್ಲ ಎಷ್ಟೋ ಸಲ ಹೇಳಿಕೊಟ್ಟಿದ್ದ ಪಾಠವನ್ನು ನೆನಪಿಗೆ ತಂದುಕೊಂಡು ಮುಂದಿನ ಎರಡು ಮಾತು ಮುಗಿಸಿ, ಪರದೆಯ ಹಿಂದಕ್ಕೆ ಸರಿದೆ. ಮುಂದಿನ ಬಹುಪಾಲು ಕಾರ್ಯಕ್ರಮವನ್ನು ನಾನು ನೋಡಲೂ ಇಲ್ಲ. ಭಾಷಣಗಳನ್ನು ಕೇಳಲೂ ಇಲ್ಲ. ನನ್ನ ಮನಸ್ಸೆಲ್ಲ ಮನೆಯಲ್ಲಿ ಮಂಚದ ಮೇಲೆ ಮಸಕು ಮಸಕಾಗಿ ಮಲಗಿದ್ದ ನಮ್ಮ ಶರ್ಮಾಜಿಯ ಬಳಿಗೇ ಹೊರಟು ಹೋಗಿತ್ತು.

ನಾವೆಲ್ಲ ಇಲ್ಲಿ ಸನ್ಮಾನದ ಸಂಭ್ರಮದಲ್ಲಿ ತೊಡಗಿದ್ದರೆ, ಅಲ್ಲಿ ಮನೆಯಲ್ಲಿ ಶರ್ಮರು ಮಾತನಾಡಲಾರದೆ, ಓಡಾಡಲಾರದೆ, ಬರೆಯಲಾರದೆ, ಹಿಂದಿನ ಜೀವನದ ನೆರಳು ಮಾತ್ರ ಆಗಿ ಮಲಗಿದ್ದರು. ಇಲ್ಲಿ ಪರಿಷತ್ತಿನ ಸಭೆಯಲ್ಲಿ ಅವರ ಗುಣಗಾನ, ಅವರ ಕಾರ್ಯಸ್ಮರಣೆ, ಅವರ ಸೇವಾಪ್ರಶಂಸೆ, ಹೃದಯಂಗಮವಾಗಿ ಸಾಗಿತ್ತು. ಎಂಥ ಸಂಕಟಕರ ಎಂದೇ ಎನಿಸಿತ್ತು ನಮಗೆಲ್ಲ. ಆದರೆ ನತ್ವಂ ಶೋಚಿತುಮರ್ಹಸಿ! ಅವರೇ ನಮಗೆ ಹೇಳಿದ್ದರಲ್ಲ ಪಾಠ.

ಸಭೆಯಲ್ಲಿ ಮಾತನಾಡಿದವರ ಎಲ್ಲರ ಪ್ರಾರ್ಥನೆಯೂ ಒಂದೇ ಆಗಿತ್ತು. ಪಾದರಸದ ಚಟುವಟಿಕೆ, ದಿಟ್ಟ ನಿಲುವು, ಸಿದ್ಧಹಸ್ತ ಸಾಹಿತಿ, ನಿರ್ಭೀತ ಪತ್ರಿಕೋದ್ಯಮಿ, ಕೆಚ್ಚೆದೆಯ ಸ್ವಾತಂತ್ರ್ಯ ಹೋರಾಟಗಾರ, ಸರ್ವೋದಯ ಗಾಂಧೀ ವಿಚಾರಗಳ ಹರಿಕಾರ ಆಕಾರದಲ್ಲಿ ವಾಮನ, ಸಾಹಿತ್ಯದಲ್ಲಿ ತ್ರಿವಿಕ್ರಮ, ವ್ಯಕ್ತಿ ಚಿತ್ರಣದಲ್ಲಿ ಅಸಮಾನ ಲೇಖಕ, ಉಭಯ ವೇದಾಂತ ಪ್ರವರ್ತಕರಷ್ಟೇ ಅಲ್ಲ, ಲೀಲಾವಿಭೂತಿಯಿಂದ ನಿತ್ಯ ವಿಭೂತಿ ಪಡೆಯುತ್ತಿರುವ ಉಭಯ ವಿಭೂತಿಪುರುಷ, ಮಾನವೀಯ ಮೌಲ್ಯಗಳ ಸಂಕೇತ, ಚೂಟಿಯ ಮನುಷ್ಯ– ಇತ್ಯಾದಿ ಪ್ರಶಂಸೆಯ ಮಾತುಗಳು ಭಾಷಣಕಾರರ ಅಂತಃಕರಣದಿಂದ ಮಾಲೆಮಾಲೆಯಾಗಿ ಬರುತ್ತಿದ್ದವು. ಸಭೆಯಲ್ಲಿ ಕಿಕ್ಕಿರಿದು ನೆರೆದಿದ್ದವರ ಅಂತಃಕರಣವನ್ನು ಆರ್ದ್ರವಾಗಿಸುತ್ತಿದ್ದವು. ಈ ಎಲ್ಲ ಮಾತಿನ ಮಾಲೆಯಲ್ಲೂ ಒಂದೇ ನೂಲು, "ದೇವರೇ, ಇಂಥ ಒಳ್ಳೆಯ ಜೀವಕ್ಕೆ ಇಂಥ ಶಿಕ್ಷೆ ಏಕೆ? ಎಷ್ಟೋ ಜನರಿಗೆ ಬೆಳಕನ್ನು ಇತ್ತ ಬದುಕು

ಈಗ ಕಾಯಿಲೆಯ ಕತ್ತಲಲ್ಲಿ ತೊಳಲಬೇಕೇ? ಬೇಗ ಕತ್ತಲು ಕಳೆಯಲಿ, ನಸುಕು ಮೂಡಲಿ, ಗೆಲುವು ಕಾಣಿಸಲಿ."

"ಅಣ್ಣ" ಮಾಸ್ತಿಯವರು ಅಧ್ಯಕ್ಷಪೀಠದಿಂದ ಹೇಳಿದ ಮಾತು ಎಲ್ಲರ ಮನಸ್ಸನ್ನೂ ತಟ್ಟಿತ್ತು. ಎಲ್ಲರ ಹೃದಯದಲ್ಲೂ ಪ್ರತಿಸ್ಪಂದನಗೊಂಡಿತ್ತು... "ಎಲ್ಲೆಡೆ ಸಂಚರಿಸುತ್ತಿರುವ ದೈವ, ಶರ್ಮರ ಆರೋಗ್ಯವನ್ನು ಮತ್ತೆ ಕೊಡಲಿ!" "ತಥಾಸ್ತು" ಎಂದಿತ್ತು ಸಭೆ.

ಸನ್ಮಾನಿತರ ಪರವಾಗಿ ಮಗ ಡಾ॥ ಎಸ್.ಕೆ.ಶ್ರೀನಿವಾಸ್, ಸಂಭಾವನಾ ಗ್ರಂಥವನ್ನೂ ಕಾಣಿಕೆಯನ್ನೂ ಸ್ವೀಕರಿಸಿದರು.

ಸಭೆ ಮುಗಿದಿತ್ತು ನೆನಪು ಉಳಿದಿತ್ತು.

ಈ ಕಾಯಿಲೆಯ ಕಪಿಮುಷ್ಟಿಯಿಂದ ಕೃಷ್ಣಶರ್ಮರಿಗೆ ಬಿಡುಗಡೆ ಆಗಲಿ, ಆಗ ಬೇಕು, ಆಗುತ್ತದೆ ಎಂಬ ಅಷ್ಟೂ ಜನ ಹಿರಿಯರ, ಸಹೃದಯಿ ಸನ್ಮಿತ್ರರ ಹಾರೈಕೆ, ಹಂಬಲ, ಮೊರೆ ಪಡೆದ ಪ್ರತಿಫಲ ಬೇರೆ ರೀತಿಯದೇ ಆಗಿತ್ತು.

ಮೂರು ತಿಂಗಳು ಅಷ್ಟೆ. ಅಕ್ಟೋಬರ್ ಹದಿನಾಲ್ಕು. ಅಂದೂ ಭಾನುವಾರ ಶರ್ಮರಿಗೆ ಬಿಡುಗಡೆ ಬಂದಿತ್ತು. ಕಾಯಿಲೆಯಿಂದ ದೇಹಕ್ಕೆ ಮಾತ್ರವಲ್ಲ, ದೇಹದಿಂದ ಆತ್ಮಕ್ಕೇ ಬಿಡುಗಡೆ!

ಸನ್ಮಾನ ಆದ ಕೆಲವು ದಿನ ಸ್ವಲ್ಪ ಗೆಲುವೂ ಕಂಡಿತ್ತು. ಆ ಸಮಾರಂಭದ ಧ್ವನಿ ಮುದ್ರಿಕೆಯನ್ನು ಮನೆಯಲ್ಲಿ ಕೇಳಿದಾಗ, ಅಂದಿನ ವಿವರಗಳನ್ನು ಮಿತ್ರರಿಂದ ಕೇಳಿದಾಗ ಶರ್ಮರ ಅನಾಸಕ್ತ ಮನಸ್ಸಿಗೂ ಒಂದು ಹರ್ಷದ ಗೆರೆ ಮೂಡಿತ್ತು. ನಾಲ್ಕು ವರ್ಷಗಳಿಂದಲೂ ಹೀಗೆಯೇ ಮಲಗಿದ್ದು, ನಡುನಡುವೆ ಏರುಪೇರುಗಳನ್ನೂ ದಾಟಿದ್ದ ಜೀವ ಚಟ್ಟನೇ ತೆರಳುವುದೆಂಬ ನಿರೀಕ್ಷೆ ಇರಲಿಲ್ಲ. ಆದರೆ ಅದು ಹುಸಿ ಆಯಿತು.

ಆ ಹೊತ್ತು ಅಕ್ಟೋಬರ್ ಹದಿನಾಲ್ಕು ಭಾನುವಾರ. ಸಂಜೆ ಮಲ್ಲೇಶ್ವರದಲ್ಲಿ ತೆಂಗಿನ ಮರದ ಶ್ರೀ ರಾಮಮಂದಿರದಲ್ಲಿ ನಾವೆಲ್ಲ ಸೇರಿದ್ದೆವು. ಒಂದು ಸತ್ಕಾರ ಸಮಾರಂಭ. ಶ್ರೀರಾಮಮಂದಿರದ ಟ್ರಸ್ಟಿಗಳಲ್ಲಿ ಒಬ್ಬರೂ, ಆತ್ಮೀಯ ಮಿತ್ರರೂ ಆದ ಅಡ್ವೋಕೇಟ್ ಬಿ.ಟಿ.ಪಾರ್ಥಸಾರಥಿಯವರು ರಷ್ಯ ಪ್ರವಾಸಕ್ಕೆ ಹೊರಟಿದ್ದರು. ಅಂದು ಅವರಿಗೆ ಬೀಳ್ಕೊಡಿಗೆ. ರಾಮಮಂದಿರ ಶರ್ಮರು ಜೀರ್ಣೋದ್ಧಾರ ಮಾಡಿದ್ದೇ. ಅಲ್ಲೇ ಸಮಾರಂಭ. ತಿಂಡಿತೀರ್ಥ ಆಗಿ ನಾಲ್ಕೂ ಮಿತ್ರರ ಮಾತೂ ಆಗಿತ್ತು. ಇನ್ನೇನು ಮುಗಿಯಬೇಕು. ಗೆಳೆಯ ಜಿ. ರಾಘವ ಓಡಿಬಂದು ಹೇಳದರು "ಶರ್ಮಾಜಿ ತೀರಿಕೊಂಡರು ಈಗತಾನೇ." ಸಂಜೆ ಏಳರ ಸಮಯ. ಸಭೆ ಮುರಿಯಿತು. ಎಲ್ಲರೂ ನಡೆದೆವು ಶರ್ಮರ ಮನೆಗೆ.

ನಮ್ಮ ನೆಚ್ಚಿನ 'ಶರ್ಮಾವರು' ನಡೆದಿದ್ದರು. ಗೂಡಿನಲ್ಲಿ ಸಿಕ್ಕಿದ್ದ ಹಕ್ಕಿಗೆ ಬಿಡುಗಡೆ ದೊರಕಿತ್ತು. ಹಾರಿಹೋಗಿತ್ತು ಅದು ವಿಶಾಲ ಆಕಾಶದಲ್ಲಿ.

ಬದುಕಿನ ಉದ್ದಕ್ಕೂ ತನ್ನ ಎಲ್ಲ ಕಾಲವನ್ನೂ, ಎಲ್ಲ ಪ್ರತಿಭೆಯನ್ನೂ, ಎಲ್ಲ ಚೇತನವನ್ನೂ ನಾಡು ನುಡಿಗಾಗಿ ಸವೆಸಿದ ಜೀವ, ಕ್ರಾಂತಿಯ ಕಿಡಿಗಳನ್ನು ಚಿಮ್ಮಿಸಿದ ಬದುಕು ತಣ್ಣಗಾಗಿತ್ತು.

* * *

ಸತ್ಯಮೇವ ಜಯತಿ

– ಡಾ॥ ಕೆ. ಜಗದೀಶ ಪೈ

'ಸತ್ಯಮೇವ ಜಯತೇ' ಎಂಬುದು ನಮ್ಮ ದೇಶದ ಧ್ಯೇಯವಾಕ್ಯ. (ನಿಜವಾಗಿ ಇದು ಮುಂಡಕ ಉಪನಿಷತ್ತಿನಲ್ಲಿ 'ಸತ್ಯಮೇವ ಜಯತಿ' ಎಂಬುದಾಗಿ ಇದೆ. ವ್ಯಾಕರಣದ ದೃಷ್ಟಿಯಿಂದ 'ಸತ್ಯಮೇವ ಜಯತೇ' ಎಂಬುದು ತಪ್ಪು ಪ್ರಯೋಗ.) ಈ ವಾಕ್ಯವನ್ನು ನಮ್ಮ ಸರಕಾರ ಲೋಕಸಭೆಯಲ್ಲೂ, ನಾಣ್ಯಗಳಲ್ಲೂ, ರೂಪಾಯಿಗಳಲ್ಲೂ ಅಚ್ಚುಹಾಕಿಸಿದೆ. ಪ್ರಾಚೀನ ಕಾಲದಿಂದಲೂ ಈ ದೇಶದಲ್ಲಿ 'ಸತ್ಯ' ಎಂಬುದು ಬಹಳ ಅಮೂಲ್ಯವಾದದ್ದು ಎಂಬುದಾಗಿ, ಜೀವನದಲ್ಲಿ ನಾವು ಕಟ್ಟಕಡೆಗೆ ಪಡೆಯಬೇಕಾದದ್ದು ಸತ್ಯ ಎಂಬುದಾಗಿ ಪೂರ್ವಜರಿಗೆ ಗೊತ್ತಿತ್ತು.

ಸತ್ಯವನ್ನು ಕುರಿತು ತಿಳಿದುಕೊಳ್ಳುವುದು ಹಾಗೂ ಸತ್ಯದ ಸಾಕ್ಷಾತ್ಕಾರ ಇವೆರಡೂ ಭಿನ್ನವಾಗಿವೆ. ಬೆಳಕಿನ ಬಗ್ಗೆ ಆಲೋಚಿಸುವುದಕ್ಕಿಂತ ಬೆಳಕನ್ನು ಕಾಣುವುದು ಮುಖ್ಯ. ಅದೇ ರೀತಿ ಸತ್ಯದ ಬಗ್ಗೆ ಚಿಂತನೆ ನಡೆಸುವುದಕ್ಕಿಂತ ಸತ್ಯವನ್ನು ಕಾಣುವುದು ಮುಖ್ಯ. ಜಗತ್ತಿನ ಇತರ ದೇಶಗಳಲ್ಲಿ ಸತ್ಯದ ಚಿಂತನೆ ನಡೆದುದರ ಫಲವಾಗಿ ಅಲ್ಲಿ ಹಲವಾರು ತತ್ವಜ್ಞಾನಿಗಳು ಕಂಡುಬರುತ್ತಾರೆ: ಪ್ಲೇಟೋ, ಅರಸ್ತೊ, ಥಾಮಸ್ ಅಕ್ವಿನಸ್, ಕಾಮ್ಟ್, ಹೆಗಲ್, ಬ್ರ್ಯಾಡ್ಲೇ ಮುಂತಾದವರು. ಆದರೆ ಭಾರತದಲ್ಲಿ ಕೇವಲ ತಾತ್ವಿಕರು ಮಾತ್ರ ತಯಾರಾಗಿಲ್ಲ. ಬದಲಿಗೆ ಹಲವಾರು ದಾರ್ಶನಿಕರೂ ಕಂಡುಬರುತ್ತಾರೆ. 'ಫಿಲಾಸಫಿ' ಎಂಬ ಪದಕ್ಕೆ ಆಲೋಚಿಸುವುದು, ಚಿಂತನೆ ನಡೆಸುವುದು ಎಂದರ್ಥ. 'ದರ್ಶನ' ಎಂದರೆ ಕಾಣುವುದು. ಸತ್ಯದ ಶೋಧನೆಯನ್ನು ನಾವು 'ದರ್ಶನ' ಎಂದು ಕರೆದಿದ್ದೇವೆ. ಗೌತಮಬುದ್ಧ, ಮಹಾವೀರ, ನೇಮಿನಾಥ, ಕಬೀರ, ನಾನಕ್, ಶ್ರೀರಾಮಕೃಷ್ಣ ಪರಮಹಂಸ, ಸ್ವಾಮಿ ವಿವೇಕಾನಂದ, ಶ್ರೀ ಅರವಿಂದ – ಇವರೆಲ್ಲರೂ ತತ್ವಶಾಸ್ತ್ರವನ್ನು ಅರಿತ ಭಾರತದ ಫಿಲಾಸಫರರು ಮಾತ್ರ ಆಗಿರಲಿಲ್ಲ, ಬದಲಿಗೆ ಸತ್ಯದ ಸಾಕ್ಷಾತ್ಕಾರ ಮಾಡಿಕೊಂಡ ದಾರ್ಶನಿಕರೂ ಆಗಿದ್ದರು. ಸತ್ಯವನ್ನು ತಿಳಿಯುವುದಕ್ಕಿಂತ ಅದನ್ನು ಜೀವನದಲ್ಲಿ ಅಳವಡಿಸುವುದಕ್ಕೆ ನಮ್ಮವರು ಮಹತ್ವ ಕೊಟ್ಟರು.

ಮಹಾಭಾರತದ ಒಂದು ಪ್ರಸಂಗ. ದ್ರೋಣಾಚಾರ್ಯರಿಗೆ ಪಾಂಡವ–ಕೌರವರಲ್ಲಿ ಯುದಿಷ್ಠಿರ ಮಾತ್ರ ಬಹಳ ಬುದ್ಧಿವಂತನೆಂದೆನಿಸಿತ್ತು. ಆದರೆ ಸ್ವಲ್ಪ ದಿನ ಅನುಭವವಾದ ಮೇಲೆ ಅವನೊಬ್ಬ ಮುಗ್ಧ ಎನಿಸತೊಡಗಿತು. ಉಳಿದವರೆಲ್ಲ ಮುಂದೆ ಮುಂದೆ, ಹೊಸ ಹೊಸ ಪಾಠಗಳನ್ನು ಕಲಿಯುತ್ತ ಹೋಗುತ್ತಿದ್ದರು. ಯುಧಿಷ್ಠಿರ ಮಾತ್ರ ಇನ್ನೂ ಮೊದಲನೇ ಪಾಠದಲ್ಲಿ ಕುಳಿತಿದ್ದ. ದ್ರೋಣಾಚಾರ್ಯರಿಗೂ ಸಹನೆ ಮೀರಿತು. ಒಂದು ದಿನ ಕೇಳಿಯೇ ಬಿಟ್ಟರು : "ನೀನು ಮುಂದಕ್ಕೆ ಹೋಗುವೆಯೋ ಅಥವಾ ಜೀವನವೆಲ್ಲ ಮೊದಲನೇ ಪಾಠದಲ್ಲೇ ಕೂತಿರುವೆಯೋ?" ಅದಕ್ಕೆ ಯುದಿಷ್ಠಿರ ಹೇಳಿದನಂತೆ: "ಮೊದಲ ಪಾಠವೇ ಸರಿಯಾಗಿ ಇಳಿಯದಿರುವಾಗ ಎರಡನೇ ಪಾಠಕ್ಕೆ ಹೋಗುವುದರಲ್ಲಿ ಅರ್ಥವಾದರೂ ಏನಿದೆ?"

ಮೊದಲ ಪಾಠವಿದ್ದುದು ಸತ್ಯದ ಬಗ್ಗೆ. ಉಳಿದ ಹುಡುಗರೆಲ್ಲ ಅದನ್ನು ಗಟ್ಟಿಮಾಡಿದರು, ಮುಂದಿನ ಪಾಠಕ್ಕೆ ಹೋದರು. ಯುಧಿಷ್ಠಿರ ಹೇಳಿದ: "ನಾನು

ಸತ್ಯವನ್ನೇ ನುಡಿಯುತ್ತಿರುವವರೆಗೆ ಮುಂದಿನ ಪಾಠಕ್ಕೆ ಹೇಗೆ ಹೋಗಲಿ? ತಾವು ಇಷ್ಟು ಆತುರ ಮಾಡಬೇಡಿ." ಆಗ ದ್ರೋಣರಿಗೆ ಯುಧಿಷ್ಠರನ ಮನಃಸ್ಥಿತಿ ಅರ್ಥವಾಯಿತು. ಸತ್ಯದಿಂದ ಮುಂದೆ ಬೇರಾವ ಪಾಠ ತಾನೆ ಇದೆ? ಅವರು ಹೇಳಿದರು – "ನೀನು ಹಾಗೆಯೇ ಮಾಡು. ಆತುರ ಪಡಬೇಕಾದ್ದಿಲ್ಲ. ನೀನು ಮೊಲ ಪಾಠವನ್ನು ಪೂರ್ತಿ ಕಲಿತರೆ ಎಲ್ಲ ಪಾಠಗಳನ್ನೂ ಕಲಿತಂತಯೇ."

ಮಹಾಭಾರತ ಕಡೆಯ ಪ್ರಸಂಗ. ಎಲ್ಲ ಸೋದರರರೂ ಸ್ವರ್ಗಾರೋಹಣಕ್ಕೆ ಹೊರಟರು. ಆಗ ಓರ್ವನು ತತ್ತರಿಸಿ ಬೀಳತೊಡಗಿದ. ಮತ್ತೊಬ್ಬ ಕರಗಿ ನೀರಾಗತೊಡಗಿದ. ಸ್ವರ್ಗದ ಹಾದಿಯಲ್ಲಿ ಯಾರೂ ಗಟ್ಟಿಯಾಗಿ ನಿಲ್ಲದೆ ಹೋದರು. ಬಾಗಿಲ ಬಳಿಗೆ ಯುದಿಷ್ಠಿರನೊಬ್ಬ ಮಾತ್ರ ಹಾಗೂ ಹೀಗೂ ಸೇರಿದ. ಅವನ ಒಂದು ನಾಯಿಯೂ ಸಂಗಡ ಹೋಯಿತು. ಸತ್ಯವು ಅಲ್ಲಿಗೆ ಸೇರಿತು, ಸತ್ಯದೊಂದಿಗೆ ಗಾಢವಾಗಿ ಸಾಂಗತ್ಯವನ್ನು ಹೊಂದಿದವನೂ ಹೋದ. ಆ ಸತ್ಯವು ಅವನ ನಾಯಿಯಾಗಿತ್ತು. ಅದು ಎಡೆಬಿಡದೆ ಅವನೊಂದಿಗೆ ಇತ್ತು. ಆ ಸತ್ಯದ ನಿಷ್ಠೆ ಅಪಾರ. ಅವನ ತಮ್ಮಂದಿರು ದಾರಿಯಲ್ಲಿ ದಣಿದು ಬಿದ್ದರು. ನಾಯಿ ಮಾತ್ರ ಕುಂದಲಿಲ್ಲ. ಅದು ಯುಧಿಷ್ಠಿರನ ಸಂಗಡಿಕೆಯನ್ನು ತನ್ನ ಸರ್ವಸ್ವವೆಂದು ತಿಳಿದಿತ್ತು. ಯುಧಿಷ್ಠಿರನಿಗೇ ಆಶ್ಚರ್ಯ: ತನ್ನವರಲ್ಲಿ ಯಾರೊಬ್ಬರೂ ಬಾಗಿಲವರೆಗೆ ಬಾರದೆ ಹೋದರು. ಆದರೆ ಈ ನಾಯಿ ಮಾತ್ರ ಜೊತೆಗೆ ಬಂದಿತ್ತು.

ಬಾಗಿಲು ತೆರೆಯಿತು. ಯುಧಿಷ್ಠಿರನಿಗೆ ಸುಸ್ವಾಗತವೂ ದೊರೆಯಿತು. ಆದರೆ ದ್ವಾರಪಾಲಕ ಹೇಳಿದನಂತೆ: "ಹಾಗಾದರೆ ನಾನೂ ಒಳಕ್ಕೆ ಬರಲಾರೆ. ನನ್ನ ಸೋದರರು ನನ್ನ ಕೈಬಿಟ್ಟರು, ನನ್ನ ಹೆಂಡತಿಯೂ ನನ್ನೊಂದಿಗೆ ಬಾರದೆ ಹೋದಳು. ಆದರೆ ಅನನ್ಯ ನಿಷ್ಠೆಯುಳ್ಳ ಈ ನಾಯಿ ನನ್ನ ಬಾಳಿನುದ್ದಕ್ಕೂ ಇಷ್ಟು ದೂರ ನನ್ನನ್ನು ಒಂದರೆಕ್ಷಣವೂ ಬಿಡದೆ ಕರೆತಂದಿದೆ. ಈ ನಾಯಿಯನ್ನು ಹೊರಗೆ ಬಿಟ್ಟು ನಾನೊಬ್ಬನೇ ಎಂದಿಗೂ ಹೊಗಲಾರೆ. ಹಾಗೆ ಮಾಡಿದರೆ ನಾನು ಈ ನಾಯಿಗಿಂತಲೂ ಕೀಳಾಗುವೆ."

ಆಗ ಸ್ವರ್ಗವೆಲ್ಲ ನಕ್ಕಿತು. ದೇವತೆಗಳು ಹೇಳಿದರು: "ತಾವು ಒಳಗೆ ಬನ್ನಿ." ಯುಧಿಷ್ಠಿರನು ದೃಷ್ಟಿಸಿ ನೋಡಿದಾಗ ಅಲ್ಲಿ ನಾಯಿಯೇ ಇರಲಿಲ್ಲ! ಸ್ವಯಂ ಮಹಾವಿಷ್ಣು ನಿಂತಿದ್ದ. ಇದು ಆತನ ಪರೀಕ್ಷೆಯಾಗಿತ್ತು. ಆ ಹೊತ್ತಿನಲ್ಲಿ ಒಂದು ವೇಳೆ ಯುಧಿಷ್ಠಿರನು ನಾಯಿಯನ್ನು ಮರೆತು ಸ್ವರ್ಗವನ್ನು ಪ್ರವೇಶಿಸಿದ್ದಿದ್ದರೆ ಸ್ವರ್ಗವು ಆತನ ಕೈತಪ್ಪಿ ಹೋಗುತ್ತಿತ್ತು.

ಹೀಗೆ ಯುಧಿಷ್ಠಿರನು ಕಲಿತದ್ದು ಒಂದೇ ಪಾಠ – ಸತ್ಯದ ಪಾಠ. ಅಷ್ಟೇ ಸಾಕು. ಅಷ್ಟು ಮಾತ್ರವೇ ಮನುಷ್ಯನನ್ನು ಸ್ವರ್ಗಕ್ಕೇರಿಸುವುದು. ಇದನ್ನು ಕಲಿಯಲು ಅರ್ಜುನನಿಗೆ ಸಮಯ ಹಿಡಿಯಿತು. ಪೂರ್ತಿ ಗೀತೆಯನ್ನು ಶ್ರೀಕೃಷ್ಣ ಬೋಧಿಸಿದರೂ ಅವನಲ್ಲಿ ಸಂದೇಹಗಳು ಮೂಡುತ್ತಲೇ ಇದ್ದವು. ಯುಧಿಷ್ಠಿರನಾದರೋ ಜೀವನದಲ್ಲಿ ಕಲಿತದ್ದು ಒಂದೇ ಪಾಠ – ಸತ್ಯದ ಪಾಠ.

"ಬಹಳಷ್ಟು ಲೇಖಕರು ಸತ್ಯವನ್ನು ಅಮೂಲ್ಯವೆಂದು ಭಾವಿಸುತ್ತಾರೆ. ಆದ್ದರಿಂದ ಅದನ್ನು ಜಿಪುಣತನದಿಂದ ಖರ್ಚು ಮಾಡುತ್ತಾರೆ" ಎಂಬುದಾಗಿ ಮಾರ್ಕ್‌ಟ್ವೇನ್ ವ್ಯಂಗ್ಯವಾಗಿ ಹೇಳಿದ್ದಾನೆ. ಇದು ಅಕ್ಷರಶಃ ನಿಜ. ಇಂದು ಮಾಧ್ಯಮಗಳಲ್ಲಿ ಸತ್ಯವನ್ನು ಭೂತಗನ್ನಡಿ ಹಿಡಿದು ಹುಡುಕಬೇಕಾಗಿದೆ. ಮಾಧ್ಯಮಗಳಲ್ಲಿ ಸುಳ್ಳಿನ ಅಬ್ಬರದಿಂದ ಸತ್ಯ

ಮಸುಕಾಗಿದೆ. ಕೆಲವು ವರ್ಷಗಳ ಹಿಂದೆ ಲೋಕನಾಯಕ ಜಯಪ್ರಕಾಶ ನಾರಾಯಣರು ಸಾಯುವ ಮೊದಲೇ ನಿಧನರಾದರು ಎಂಬ ಸುದ್ದಿಯನ್ನು ನಮ್ಮ ಮಾಧ್ಯಮಗಳು ಪ್ರಸಾರ ಮಾಡಿದ್ದವು. ಆ ಸಮಯದಲ್ಲಿ ಕರ್ನಾಟಕದ ವಿಧಾನಸಭೆಯಲ್ಲಿ ಅವರಿಗೆ ಸಂತಾಪವನ್ನೂ ಸಲ್ಲಿಸಲಾಯಿತು. ಎಲ್ಲ ಮುಗಿದ ಮೇಲೆ ಗೊತ್ತಾಯಿತು – ಲೋಕನಾಯಕ ಜಯಪ್ರಕಾಶ ನಾರಾಯಣರು ಇನ್ನೂ ಜೀವಂತವಾಗಿ ಇದ್ದಾರೆ ಎಂಬುದಾಗಿ.

ಜೀವಂತ ವ್ಯಕ್ತಿಯನ್ನು ಕೊಲ್ಲುವುದು ನಮ್ಮ ದೇಶದ ಮಾಧ್ಯಮಕ್ಕೆ ಮಾತ್ರ ಸೀಮಿತವಾಗಿಲ್ಲ. ಸತ್ಯವನ್ನು ಕೊಲ್ಲುವುದು ಒಂದು ಸಾಂಕ್ರಾಮಿಕ ರೋಗ. ಅದು ಜಗತ್ತಿನ ಎಲ್ಲೆಡೆ ಕಂಡುಬರುತ್ತದೆ. ೧೮೮೮ರಲ್ಲಿ ಸ್ವೀಡನ್ ದೇಶದ ಶ್ರೀಮಂತ ಆಲ್‌ಫ್ರೆಡ್ ನೊಬೆಲ್‌ರವರು ಜೀವಂತವಿರುವಾಗಲೇ ದಿನಪತ್ರಿಕೆಯಲ್ಲಿ ಅವರ ನಿಧನದ ವಾರ್ತೆ ಪ್ರಕಟವಾಯಿತು. ಪರಿಣಾಮವಾಗಿ ಸಂತಾಪ ಸೂಚಿಸಲು ಆ ದಿನ ಆತನ ಮನೆಯ ಮುಂದೆ ದೊಡ್ಡ ಜನಜಂಗುಳಿ ಸೇರಿತು. ಡೈನಮೈಟ್ ವ್ಯಾಪಾರಿಯಾಗಿದ್ದ ನೊಬೆಲ್ ನಿಧನಕ್ಕೆ ಪತ್ರಿಕೆಯವರು 'The merchant of death is no more' ಎಂಬ ಶೀರ್ಷಿಕೆ ನೀಡಿದ್ದರು. ತನ್ನ ನಿಧನದ ಬಳಿಕ ಜನ ತನ್ನನ್ನು 'ಮರಣ ವ್ಯಾಪಾರಿ' ಎಂದು ಕರೆದು ಹಾಗೆ ತನ್ನನ್ನು ಸ್ಮರಿಸಿಕೊಳ್ಳಬಹುದೆಂಬ ದುಗುಡ ಕಾಡಿದ್ದರಿಂದಲೇ ಆತ ನೊಬೆಲ್ ಪ್ರಶಸ್ತಿ ಸ್ಥಾಪಿಸಲು ಮುಂದಾಗಿದ್ದಿರಬಹುದು.

ಮನು ಮಹರ್ಷಿಗಳು ಸತ್ಯವರ್ತನೆಯ ಕ್ರಮವನ್ನು ಹೀಗೆ ವಿಧಿಸಿದ್ದಾರೆ:

ಸತ್ಯಂ ಬ್ರೂಯಾತ್ ಪ್ರಿಯಂ ಬ್ರೂಯಾತ್
ನ ಬ್ರೂಯಾತ್ ಸತ್ಯಮಪ್ರಿಯಂ
ಪ್ರಿಯಂ ಚ ನಾನೃತಂ ಬ್ರೂಯಾತ್
ಏಷ ಧರ್ಮಃ ಸನಾತನಃ ॥

"ಸತ್ಯವಾದದ್ದನ್ನು ಹೇಳತಕ್ಕದ್ದು, ಪ್ರಿಯವಾದದ್ದನ್ನು ಹೇಳತಕ್ಕದ್ದು. ಅಪ್ರಿಯ ಸತ್ಯವನ್ನು ನುಡಿಯಬಾರದು, ಹಾಗೂ ಪ್ರಿಯವಾದ ಸುಳ್ಳನ್ನು ನುಡಿಯಬಾರದು. ಇದು ನಮ್ಮ ಸನಾತನ ಧರ್ಮ."

ಹಿಂದಿನವರು ತನ್ನ ಪ್ರಿಯರು ಯಾರಾದರೂ ಮರಣ ಹೊಂದಿದರೆ ಆ ವಾರ್ತೆಯನ್ನು ಹೇಗೆ ತಿಳಿಸುತ್ತಿದ್ದರು? ಭಾಸಕವಿಯ 'ಪ್ರತಿಮಾ ನಾಟಕ'ದಲ್ಲಿ ಈ ಒಂದು ಪ್ರಸಂಗ ಬರುತ್ತದೆ. ಭರತನಿಗೆ ತಂದೆಯ ಮರಣದ ವಾರ್ತೆಯನ್ನು, ಅಪ್ರಿಯ ಸತ್ಯವನ್ನು ತಿಳಿಸುವ ಪ್ರಕರಣವಿದು.

ಶ್ರೀರಾಮನು ವನವಾಸಕ್ಕೆ ಹೊರಟ ಬಳಿಕ ಆತನ ತಂದೆ ದಶರಥನು ಅಯೋಧ್ಯೆಯಲ್ಲಿ ಮರಣ ಹೊಂದುವನು. ಆಗ ಭರತನು ಬಹಳ ದೂರದ ಸೋದರಮಾವನ ಮನೆಯಲ್ಲಿದ್ದ. ವಸಿಷ್ಠರಿಂದ ಕಳುಹಿಸಲ್ಪಟ್ಟ ಸೂತನನ್ನು ಕಂಡೊಡನೆ ಭರತನು ತಂದೆಯ ಆರೋಗ್ಯವನ್ನು ಕುರಿತು ಕೇಳುತ್ತಾನೆ. ಆಗ ಸೂತನು ವಸಿಷ್ಠರ ನಿರ್ದೇಶನದಂತೆ ದಶರಥನು ಮೃತನಾದನೆಂದು ಹೇಳದೆ, "ಹೃದಯಾಘಾತದಿಂದ ಮೂರ್ಛೆತಪ್ಪಿ ಮಲಗಿರುವನು" ಎಂದು ಮಾತ್ರ ಹೇಳುತ್ತಾನೆ.

ಭರತನು ಅಯೋಧ್ಯೆಯ ಬಳಿಗೆ ಬರುತ್ತಾನೆ ಶುಭಗಳಿಗೆಯಲ್ಲಿ ಪುರಪ್ರವೇಶ

ಮಾಡಬೇಕಾದುದುರಿಂದ, ಅಲ್ಲಿಯವರೆಗೆ ಹೊತ್ತು ಕಳೆಯಲು ಅಲ್ಲಿಯ ಉಪವನದಲ್ಲಿದ್ದ ಒಂದು ದೇವಾಲಯಕ್ಕೆ ಹೋಗುತ್ತಾನೆ. ಅಲ್ಲಿ ಅಲಂಕೃತವಾಗಿರುವ ಪ್ರತಿಮೆಗಳ ಸಾಲನ್ನು ನೋಡುತ್ತಾನೆ. ಅವುಗಳಿಗೆ ವಂದಿಸಬೇಕು ಅನ್ನುವಷ್ಟರಲ್ಲಿ ಅರ್ಚಕನು ಪ್ರವೇಶಿಸಿ "ಈ ಕ್ಷತ್ರಿಯರ ಪ್ರತಿಮೆಗಳಿಗೆ, ದೇವತಾ ಶಂಕೆಯಿಂದ ಬ್ರಾಹ್ಮಣರು ಅವುಗಳಿಗೆ ವಂದಿಸತಕ್ಕದ್ದಲ್ಲ" ಎನ್ನುತ್ತಾನೆ.

ಭರತನು– "ಹಾಗಾದರೆ ಇವರು ಕ್ಷತ್ರಿಯರೋ, ಅವರ ಹೆಸರೇನು?" ಎಂದು ಕೇಳುತ್ತಾನೆ.

ಅರ್ಚಕ– "ಅವರು ಇಕ್ಷ್ವಾಕುಗಳು" ಎಂದ.

ಭರತ– "ಹಾಗಾದರೆ ಇವರು ಅಯೋಧ್ಯೆಯ ಒಡೆಯರು. ನನ್ನ ಸುಯೋಗದಿಂದ ಈ ಮಹಾನುಭಾವರ ಸಂದರ್ಶನ ನನಗೀಗ ದೊರೆತಿದೆ. ಈತನಾರು?"

ಅರ್ಚಕ– "ಈತನು ದಿಲೀಪ."

ಭರತ– "ಈ ಮತ್ತೊಬ್ಬನಾರು?"

ಅರ್ಚಕ– "ಈತನು ರಘುಮಹಾರಾಜನು."

ಭರತ– "ಇನ್ನು ಈತನಾರು?"

ಅರ್ಚಕ– "ಈತನು ಅಜಮಹಾರಾಜ."

ಭರತನು ಇವರನ್ನೆಲ್ಲಾ ನಮಿಸುತ್ತಿರುವಾಗ ಅವನ ದೃಷ್ಟಿ ನಾಲ್ಕನೆಯ ಮೂರ್ತಿಯ ಮೇಲೆ ಬೀಳುತ್ತದೆ. ಮನಸ್ಸು ವ್ಯಾಕುಲಗೊಳ್ಳುತ್ತದೆ. ಆಗ ಅವನು ಪೂಜಾರಿಯನ್ನು ಕುರಿತು ಹಿಂದಿನ ಮೂರ್ತಿಗಳ ಹೆಸರುಗಳನ್ನು ಪುನಃ ಹೇಳಬೇಕೆಂದು ಕೇಳುತ್ತಾನೆ. ಅವನು ಹೆಸರುಗಳನ್ನು ಇನ್ನೊಮ್ಮೆ ಹೇಳುತ್ತಾನೆ. ಭರತನು ಅವುಗಳಿಗೆ ಬೇರೆ ಬೇರೆಯಾಗಿ ನಮಸ್ಕರಿಸಿ, ಮತ್ತೊಮ್ಮೆ ಆ ಹೆಸರುಗಳನ್ನು ಕೇಳುತ್ತಾನೆ. ಕಡೆಯ ಸಾರಿ ಅರ್ಚಕನು ಅಜನವರೆಗೆ ಹೆಸರುಗಳನ್ನು ಹೇಳಿದಾಗ ಭರತನಿಗೆ ತನ್ನ ಸಂಶಯ ದೃಢವಾಗುತ್ತಾ ಬಂತು. ತನ್ನ ತಂದೆ ದಶರಥನೇ ಅಜನ ಮಗ. ಹೀಗಿರುವಾಗ ಈ ನಾಲ್ಕನೆಯ ಪ್ರತಿಮೆ ಯಾರದ್ದಾಗಿರಬಹುದು? ಬಳಿಕ ಅರ್ಚಕನನ್ನು ಕುರಿತು– "ಜೀವಿಸಿರುವವರ ಪ್ರತಿಮೆಗಳನ್ನು ಇಲ್ಲಿ ಇಡುವುದುಂಟೆ?" ಎಂದು ಕೇಳುತ್ತಾನೆ. ಅರ್ಚಕನು – "ಇಲ್ಲ, ದಿವಂಗತರಾದವರ ಪ್ರತಿಮೆಗಳನ್ನೇ ಇಲ್ಲಿರಿಸುವುದು" ಎಂದು ಹೇಳುತ್ತಾನೆ. ಭರತನು ಇದನ್ನು ಕೇಳಿ ತಂದೆಯು ಮೃತನಾಗಿದ್ದಾನೆ ಎಂದು ತಿಳಿದು ಮೂರ್ಛಿತನಾಗುತ್ತಾನೆ. ಆದರೆ ಹೃದಯಾಘಾತ ಮುಂತಾದ ಅನರ್ಥದಿಂದ ಪಾರಾಗುತ್ತಾನೆ. ಇದು ವಸಿಷ್ಠರು ಯೋಜಿಸಿದ್ದ ಉಪಾಯ.

ಒಂದು ವೇಳೆ ನೇರವಾಗಿ ಮತ್ತು ಅಪ್ರಿಯವಾಗಿ "ಭರತ, ನಿನ್ನ ತಂದೆ ದಶರಥನು ಸತ್ತು ಹೋದ" ಎಂದು ಹೇಳಿದ್ದರೆ, ತಂದೆಯ ಮೇಲೆ ಪ್ರೀತಿಯಿರುವ ಭರತನಿಗೆ ಆಘಾತ ಸಂಭವಿಸಿ ಅನರ್ಥವಾಗದೆ ಇರುತ್ತಿರಲಿಲ್ಲ.

ವಸಿಷ್ಠರು ಸತ್ಯವನ್ನು ಅಪ್ರಿಯವೆಂದು ತಿಳಿಸದೆ ಇರಲಿಲ್ಲ. ಆದರೆ ಅಪ್ರಿಯತೆಯ ಘೋರ ರೂಪವನ್ನು ಕಡಿಮೆ ಮಾಡಿದರು. ಇದು ಸನಾತನ ಸಂಸ್ಕೃತಿ.

ಸತ್ಯಕ್ಕೆ ಹಲವಾರು ಮುಖಗಳಿವೆ. ಸಂದರ್ಭ, ಸನ್ನಿವೇಶವನ್ನು ನೋಡದೆ ಸತ್ಯದ ವರದಿಯನ್ನು ಒಪ್ಪಿಸುವುದು ಕೆಲವೊಮ್ಮೆ ಅಧರ್ಮವಾಗುತ್ತದೆ. "ದುರುದ್ದೇಶದಿಂದ ಹೇಳಿದ ಸತ್ಯವು ಎಲ್ಲಾ ಸುಳ್ಳುಗಳಿಗಿಂತ ಕೆಟ್ಟದ್ದು" ಎಂಬುದಾಗಿ ವಿಲಿಯಂ ಬ್ಲೇಕ್

ಹೇಳಿದ್ದಾನೆ. ಸತ್ಯ ಮಿಗಿಲಾದುದು; ಸತ್ಯತೆಯಿಂದ ನಡೆಯುವುದು ಅದಕ್ಕಿಂತ ಮಿಗಿಲು; ಆದರೆ ಸತ್ಯದ ನಡೆ ಧರ್ಮದ ಕಡೆಗೆ ಇರಬೇಕಾದದ್ದು ಎಲ್ಲಕ್ಕಿಂತ ಮಿಗಿಲು.

ಅಸತ್ಯದ ಪೋಷಣೆಯಿಂದ ಸತ್ಯ ಸಿಗುವುದಿಲ್ಲವೆಂಬುದು ಸದಾಕಾಲಕ್ಕೂ ನಿಜ. ಕಾಗೆಯು ಕೋಗಿಲೆಯ ಮರಿಯನ್ನು ತನ್ನ ಮರಿಯೆಂದು ಭ್ರಮಿಸಿ ಸಲಹುತ್ತದೆ. ಆದರೆ ಆ ಮರಿ ಸ್ವಲ್ಪ ಬಲಿತೊಡನೆ ಅಲ್ಲಿಂದ ಹಾರಿ ಹೋಗುತ್ತದೆ. ಸುಳ್ಳಿನ ಸರಪಳಿಯನ್ನು ಸೃಷ್ಟಿಸಿ ತನ್ನ ಪ್ರತಿಷ್ಠೆಯನ್ನು ಸ್ಥಾಪಿಸುವುದು ಎಂದಿಗೂ ಶಾಶ್ವತವಲ್ಲ.

ಸುಳ್ಳು ಹೇಳುವುದರಿಂದ ಬೇರೆಯವರಿಗೆ ಹಾನಿ ಆಗುತ್ತದೆ. ಅದಕ್ಕಿಂತಲೂ ನಮಗೇ ಜಾಸ್ತಿ ಹಾನಿಯಾಗುತ್ತದೆ. ಸುಳ್ಳು ಹೇಳುವವನು ಯಾರನ್ನೂ ನಂಬುವುದಿಲ್ಲ. ಜಗತ್ತೆಲ್ಲ ಸುಳ್ಳು ಹೇಳುವವರಿಂದಲೇ ತುಂಬಿದೆ ಎಂದು ಆತ ಭಾವಿಸುತ್ತಾನೆ. ಸತ್ಯ ಹೇಳುವವನನ್ನೂ ಕೂಡಾ ಆತ ನಂಬುವುದಿಲ್ಲ. ಆತ ಯಾವುದನ್ನೂ ಸಹಜವಾಗಿ, ಸರಳವಾಗಿ ಸ್ವೀಕರಿಸುವುದಿಲ್ಲ. ಸತ್ಯವನ್ನು ನೆನಪಿಟ್ಟುಕೊಳ್ಳಬೇಕಾಗಿಲ್ಲ; ಆದರೆ ಸುಳ್ಳನ್ನು ನೆನಪಿಟ್ಟು ಪೋಷಿಸಬೇಕಾಗುತ್ತದೆ. ಮುಂದಿನ ಸುಳ್ಳಿಗೆ ಹಿಂದಿನ ಸುಳ್ಳೇ ಬುನಾದಿ. ಸುಳ್ಳಿನಿಂದಲೇ ಆತನ ಒಳಗಿರುವ ಮನುಷ್ಯತ್ವ ಸಾಯುತ್ತದೆ. ಹೀಗೆ ಸುಳ್ಳು ಮನುಷ್ಯನನ್ನು ಜೀವಂತವಾಗಿ ಕೊಲ್ಲುತ್ತದೆ. ಸದಾ ಸುಳ್ಳು ಹೇಳುವವನಿಗೆ ವ್ಯಕ್ತಿತ್ವ ಎಂಬುದೇ ಇರುವುದಿಲ್ಲ.

ಈ ದೇಶದ ಪೂರ್ವಜರು ಸತ್ಯವನ್ನು ಒಂದು ವ್ರತದಂತೆ ಪಾಲಿಸಿಕೊಂಡು ಬರುತ್ತಿದ್ದರು. ಸತ್ಯವು ನಮ್ಮ ಹಿರಿಯರಿಗೆ ಉಸಿರಿನಷ್ಟೆ ಸಹಜವಾಗಿತ್ತು. ಕಷ್ಟ-ನಷ್ಟ, ಸಾವು-ನೋವು ಸ್ವೀಕರಿಸಿದರೂ ಸತ್ಯವನ್ನು ಬಿಡಲಿಲ್ಲ. ಸಾವಿನ ಆಚೆಯ ಸತ್ಯಕ್ಕಾಗಿ ನಚಿಕೇತನು ಯಮರಾಜನನ್ನು ಜೀವಂತವಾಗಿ ಭೇಟಿಯಾದ. ಆಗ ಆ ಬಾಲಕನಿಗೆ ರಾಜ್ಯದ, ಐಶ್ವರ್ಯದ ನಾನಾ ಆಮಿಷವನ್ನೊಡ್ಡಿದ. ಆದರೆ ಸತ್ಯದ ಎದುರಿಗೆ ಇದೆಲ್ಲವೂ ಕ್ಷುಲ್ಲಕ ಎಂದು ತಿಳಿದು ನಚಿಕೇತನು ಸತ್ಯ ತಿಳಿಸುವುದಕ್ಕೆ ಆಗ್ರಹಪಡಿಸಿದ. ಹರಿಶ್ಚಂದ್ರನು ಸತ್ಯಕ್ಕಾಗಿ ಮನೆ, ಮಡದಿ-ಮಕ್ಕಳನ್ನು ಕಳೆದುಕೊಂಡರೂ ಸತ್ಯವನ್ನು ಬಿಡಲಿಲ್ಲ. ರಾಮನು ತಂದೆಯ ವಚನವನ್ನು ಸತ್ಯಗೊಳಿಸುವುದಕ್ಕಾಗಿ ರಾಜ್ಯವನ್ನು ತೊರೆದು ವನವಾಸಕ್ಕೆ ಹೋದ. ಪುಣ್ಯಕೋಟಿ ಎಂಬ ಗೋವು ಸತ್ಯದ ಪಾಲನೆಗಾಗಿ ಸಾಯಲು ಹುಲಿಯ ಹತ್ತಿರ ಮರಳಿ ಬಂದಾಗ, ಆ ಕ್ರೂರ ಹುಲಿ ಕೂಡಾ ಸತ್ಯಕ್ಕೆ ತಲೆಬಾಗಿ ತನ್ನ ಪ್ರಾಣವನ್ನೇ ಕಳಕೊಂಡಿತು. ಮಹಾತ್ಮ ಗಾಂಧಿಯವರು ತಮ್ಮ ಬದುಕಿನಲ್ಲಿ ಸತ್ಯಕ್ಕೆ ಬಹಳ ಬೆಲೆ ಕೊಟ್ಟರು. ತಾನು ನಡೆಸಿದ ಚಳವಳಿಗೆ 'ಸತ್ಯಾಗ್ರಹ' ಎಂತಲೇ ಹೆಸರು ಕೊಟ್ಟರು.

ಆಲ್-ಹಿಲ್ಲಜ್ ಮನ್ಸೂರರು 'ಅನಲ್-ಹಕ್.' (ಅಹಂ ಬ್ರಹ್ಮಾಸ್ಮಿ) ಎಂದು ಘೋಷಿಸಿದರು. ಮನ್ಸೂರರು ಈ ದೇಶದಲ್ಲಿ ಹಾಗೆ ಹೇಳಿದ್ದರೆ ಅವರನ್ನು ನಾವು ತಲೆಯ ಮೇಲೆ ಹೊತ್ತು ತಿರುಗುತ್ತಿದ್ದೆವು. ಉಪನಿಷತ್ತಿನ ಋಷಿಗಳೊಂದಿಗೆ ಅವರನ್ನು ಕೂರಿಸುತ್ತಿದ್ದೆವು. ಆದರೆ ಮುಸಲ್ಮಾನರು ಮನ್ಸೂರರನ್ನು ಕೊಲ್ಲಲು ತಯಾರಾದರು. ಮನ್ಸೂರರ ಗುರು ಜುನ್ನೈದ್ ಸ್ವತಃ ಸಿದ್ಧಪುರುಷ. ಇವರೂ ಸಂತ ಮನ್ಸೂರರಿಗೆ ಹೇಳಿದರು: "ಕೇಳು, ನಿನಗೆ ಮಾತ್ರ 'ಆನಲ್ ಹಕ್'ನ ಜ್ಞಾನೋದಯ ಆಗಿರುವುದು, ನಮಗಾಗಿಲ್ಲ ಎಂಬುದು ನಿನ್ನ ಎಣಿಕೆಯೇನು? ನಮಗೂ ಸತ್ಯದ ಜ್ಞಾನೋದಯ ಆದರೂ ನಾವು ಬಾಯಿಗೆ ಬೀಗ ಹಾಕಿಕೊಂಡು ಸುಮ್ಮನಿದ್ದೇವೆ. ನೀನೂ ಅಷ್ಟೆ: ಬಾಯಿ

ಮುಚ್ಚಿಕೋ, ಇಲ್ಲದೆ ಹೋದಲ್ಲಿ ಜೀವವನ್ನು ಕಳೆದುಕೊಳ್ಳಬೇಕಾಗುವುದು."

ಮನ್ಸೂರ್ ಆಗ ಹೇಳಿದರು: "ನಾನು ಹೇಳುತ್ತಿರುವುದಾದರೆ ಬಾಯಿ ಮುಚ್ಚಿಕೊಳ್ಳಬಹುದಿತ್ತು. ಹೇಳುತ್ತಿರುವವನು ಅವನೇ. ನಾನು ಆತನ ಬಾಯನ್ನು ಹೇಗೆ ಮುಚ್ಚಲಿ? ಹೇಳಬೇಕೆನಿಸಿದಾಗ ಹೇಳುತ್ತಾನೆ. ಬೇಡ ಅನಿಸಿದಾಗ ಹೇಳುವುದಿಲ್ಲ. ನೀವು ನಿಮ್ಮ ಬಾಯಿಗೆ ಬೀಗ ಹಾಕಿಕೊಂಡಿರುವಿರಿ ಎಂಬ ಮಾತನ್ನು ಕೇಳಿ ನಾಚಿಕೆಯಿಂದ ತಲೆತಗ್ಗಿಸುವಂತಾಗಿದೆ ನನಗೆ!"

ಜುನೈದ್ ಅನಗತ್ಯ ಸಮಸ್ಯೆಗಳಲ್ಲಿ ಸಿಲುಕಲು ಇಷ್ಟಪಡುತ್ತಿರಲಿಲ್ಲ. ಏನು ಹೇಳಬಹುದಾದ ವಿಚಾರಗಳಿತ್ತೋ ಅದನ್ನವರು ತಮ್ಮ ಶಿಷ್ಯರಿಗೆ ಮಾತ್ರ ಹೇಳುತ್ತಿದ್ದರು. ಸಮೂಹದಲ್ಲಿ ಹೇಳುವುದು ವ್ಯರ್ಥ ಎಂಬುದು ಅವರ ನಿಲುವಾಗಿತ್ತು. ಆದರೆ ಮನ್ಸೂರ್ ಸಮೂಹದ ನಡುವೆ ಘೋಷಿಸಲು ಶುರು ಮಾಡಿದರು.

ಪುನಃ ಜುನೈದರು ಮನ್ಸೂರರನ್ನು ಕರೆದು ಹೇಳಿದರು: "ನೋಡಯ್ಯಾ, ನೀನೇ ನಿನ್ನ ಮೃತ್ಯುವನ್ನು ಹತ್ತಿರಕ್ಕೆ ಕರೆಯುತ್ತಿರುವೆ. ವಿನಾಕಾರಣ ನಿನ್ನನ್ನು ಕೊಲ್ಲುವರು. ನನಗೆ ದುಃಖವಾಗುತ್ತಿದೆ. ನನ್ನ ಅತ್ಯಂತ ಪ್ರಿಯ ಶಿಷ್ಯರಲ್ಲಿ ನೀನೊಬ್ಬ. ಅದೇನು ಸತ್ಯ ಇದೆಯೋ ಅದನ್ನು ತಲಪಿರುವ ಶಿಷ್ಯರಲ್ಲಿ ನೀನೊಬ್ಬ. ನೀನು ಅದೇನು ಹೇಳುತ್ತಿರುವರಯೋ ಅದು ಸತ್ಯವೇ; ಆದರೆ ಇದರಿಂದಾಗಿ ಸಾವು ನಿನ್ನೆಡೆಗೆ ಬರುತ್ತಿದೆ. ರಾಜನ ಆದೇಶಗಳು ಈಗ ನನ್ನ ಬಳಿಗೆ ಬರುತ್ತಿವೆ: 'ಮನ್ಸೂರನನ್ನು ನಿಯಂತ್ರಿಸು, ಇಲ್ಲದೆ ಹೋದರೆ ನಿನಗೂ ಉಳಿಗಾಲವಿಲ್ಲ. ಏಕೆಂದರೆ ಮನ್ಸೂರ ನಿನ್ನ ಶಿಷ್ಯ' ಎಂದು ಹೆದರಿಸುತ್ತಿರುವನು."

ಮನ್ಸೂರ್ ಹೇಳಿದರು: " ನಿಮ್ಮಿಷ್ಟ, ನನ್ನಿಂದ ಏನು ಮಾಡಲಾಗುವುದು? ಹೇಳಬೇಕೆಂದಾಗ ಅದು ಹೇಳುವುದು, ಘೋಷಿಸಲೇ ಬೇಕಾಗುವುದು."

ಜುನೈದರು ಆಲೋಚಿಸಿ ಹೇಳುತ್ತಾರೆ, "ಸರಿ, ನೀನೀಗ ಒಂದು ಕೆಲಸ ಮಾಡು, ಇಲ್ಲಿಂದ ದೂರ ಹೋಗಿಬಿಡು, ಕಾಬಾಗೆ ಹೋಗಿ ಪರಿಕ್ರಮಿಸಿ ಬಾ"– ಎಂದು.

ಮನ್ಸೂರ್ ಎದ್ದು ಜುನೈದರ ಸುತ್ತ ಪರಿಕ್ರಮಿಸಿಬಿಟ್ಟರು. "ನೀವೇ ನನ್ನ ಕಾಬಾ, ನೀವೇ ನನ್ನ ದೇವಾಲಯ" ಎಂದು ಹೇಳಿಬಿಟ್ಟರು!

ಜುನೈದರು ಮನ್ಸೂರರನ್ನು ತ್ಯಜಿಸಿದರು. ತದನಂತರ ಮನ್ಸೂರರನ್ನು ಕೊಲ್ಲಲಾಯಿತು. ಮನ್ಸೂರರನ್ನು ಕೊಲ್ಲುವಾಗ ನೋಡಲು ಸಹಸ್ರಾರು ಜನ ನೆರೆದಿದ್ದರು. ಅವರನ್ನು ಅವಹೇಳನ ಮಾಡಲಾಯಿತು. ಜನ ಕಲ್ಲುಗಳನ್ನು ತೂರುತ್ತಿರುವಾಗ ಮನ್ಸೂರ್ ನಗುತ್ತಿದ್ದರು. ಮನ್ಸೂರರ ಹತ್ಯೆಗೆ ತನ್ನ ಒಪ್ಪಿಗೆಯೂ ಇದೆ ಎಂಬುದನ್ನು ತೋರ್ಪಡಿಸಲಿಕ್ಕಾಗಿ ಜುನೈದರೂ ಅಲ್ಲಿಗೆ ಹೋಗಿದ್ದರು. ಜುನೈದ್ ಒಂದು ಹೂವನ್ನು ಎಸೆದರು. ತಾನೂ ಮನ್ಸೂರರಿಗೆ ಕಲ್ಲು ತೂರುತ್ತಿರುವೆ ಎಂದು ಜನ ಅಂದುಕೊಳ್ಳಲಿ ಎಂದವರು ಹೀಗೆ ಮಾಡಿದ್ದರು. ಮನ್ಸೂರರ ಮೇಲೆ ಹೂ ಬಿದ್ದೊಡನೆ ಮನ್ಸೂರ್ ಅಳಲಾರಂಭಿಸಿದರು. ಆಗ ಮನ್ಸೂರರ ಬಳಿಯಲ್ಲಿದ್ದ ಒಬ್ಬರು ಅವರನ್ನು ಕೇಳಿದರು– "ನಿಮ್ಮ ಮೇಲೆ ಇಷ್ಟೊಂದು ಕಲ್ಲೇಟು ಬೀಳುತ್ತಿರುವಾಗ ನೀವು ನಗುತ್ತಿದ್ದಿರಿ, ಆದರೆ ಈ ಹೂ ನಿಮ್ಮ ಮೇಲೆ ಬಿದ್ದೊಡನೆ ನೀವೇಕೆ ಅಳುತ್ತಿರುವಿರಿ?"

ಆಗ ಮನ್ಸೂರರು ಹೇಳಿದರು: "ಉಳಿದವರೆಲ್ಲರೂ ಅರಿವಿಲ್ಲದೆ ಕಲ್ಲುಗಳನ್ನು ತೂರುತ್ತಿರುವವರು. ಅವರೆಲ್ಲರನ್ನೂ ಕ್ಷಮಿಸಬಹುದು. ಆದರೆ ಈ ಹೂವನ್ನು ಯಾರು ತೂರಿದರೋ ಅವರಿಗೆ ನಾನು ಸರಿ ಎಂಬುದು ತಿಳಿದಿದೆ. ಆದ್ದರಿಂದಾಗಿ ಈ ಹೂ ನೋವು ತರುತ್ತಿದೆ."

ಮನ್ಸೂರರನ್ನು ಹತ್ಯೆಗೈದಂತೆ ಬೇರಾರನ್ನೂ ಹತ್ಯೆಗೈಯಲಿಲ್ಲ. ಮೊದಲು ಮನ್ಸೂರರ ಕಾಲುಗಳನ್ನು ಕತ್ತರಿಸಿದರು, ಕೈಗಳನ್ನು ಕತ್ತರಿಸಿದರು, ಕಣ್ಣುಗಳನ್ನು ತೆಗೆದರು. ಅವರು ಪ್ರತಿಯೊಂದು ಅಂಗಗಳನ್ನೂ ಛೇಧ ಮಾಡಲಾಯಿತು. ಗಂಟೆಗಟ್ಟಲೆ ಈ ಕೃತ್ಯ ನಡೆಯಿತು. ನಾಲಿಗೆ ಕುಯ್ದರು. ಅನಂತರ ಅವರ ಶರೀರ ತನ್ನಷ್ಟಕ್ಕೆ ತಾನೇ ಅಸುನೀಗಲಿ ಎಂದು ಬಿಡಲಾಯಿತು.

ಸಾಕ್ರಟೀಸರಿಗೆ ವಿಷ ಉಣಿಸಲಾಯಿತು. ಅಲ್ಲಿಗೆ ಮುಗಿಯಿತು ಕೆಲಸ. ಜೀಸಸ್‌ರನ್ನು ಶೂಲಕ್ಕೇರಿಸಿ ಕೆಲಸ ಮುಗಿಸಿಬಿಟ್ಟರು. ಆದರೆ ಮನ್ಸುರರಿಗೆ ನೀಡಿದ ಶೂಲ ಎಂಥದ್ದು? ಆದರೂ ತಮ್ಮ ಕಾಲುಗಳನ್ನು ಕತ್ತರಿಸಿದಾಗ ಮನ್ಸೂರರು ನಗುತ್ತಿದ್ದರು. ನಾಲಿಗೆಯನ್ನು ಕತ್ತರಿಸುವುದಕ್ಕೆ ಮುನ್ನ 'ಅನಲ್–ಹಕ್' ಎಂದು ಕೊನೆಯದಾಗಿ ಘೋಷಿಸಿದರು! ಅವರು ಹೇಳಿದರು: " ನಾಲಿಗೆಯನ್ನು ಕತ್ತರಿಸಿದ ಮೇಲೆ ಪರಮಾತ್ಮ ನನ್ನ ಮೂಲಕ ಹೇಳಲಾಗದು, ಅದಕ್ಕಾಗಿ ನಾನು ಕೊನೆಯದಾಗಿ ಘೋಷಿಸಿ ಬಿಡುವೆ " ಅಹಂ ಬ್ರಹ್ಮಾಸ್ಮಿ" ಎಂದು.

"ಇತರರಿಗೆ ನೋವಾಗುವುದೆಂದು ಸತ್ಯಕ್ಕೆ ಅಪಚಾರ ಮಾಡುವುದು ಬೇಡ" ಎಂಬುದಾಗಿ ರವೀಂದ್ರನಾಥ್ ಠಾಗೂರ್ ಹೇಳಿದ್ದಾರೆ. ಯಾವ ಜನಾಂಗವು ತಮ್ಮ ಧಾರ್ಮಿಕ ನಂಬಿಕೆಗೆ ಚ್ಯುತಿ ಬರುತ್ತದೆ ಎಂಬ ಕಾರಣಕ್ಕಾಗಿ ಸತ್ಯಕ್ಕೆ ಅಪಚಾರ ಮಾಡುತ್ತಾರೋ ಆ ಧರ್ಮಕ್ಕೆ ಉಜ್ವಲ ಭವಿಷ್ಯವಿಲ್ಲ. ಸತ್ಯಕ್ಕೆ ಸಾವಿಲ್ಲ. ಕರಿ ಮೋಡ ಸೂರ್ಯನನ್ನು ಕೆಲಕಾಲ ಅಡಗಿಸಿಡಬಹುದು, ಆದರೆ ಸದಾಕಾಲ ಸೂರ್ಯನನ್ನು ಮರೆಮಾಚಲು ಸಾಧ್ಯವಿಲ್ಲ. ಸತ್ಯ ಕೂಡಾ ಸೂರ್ಯನಂತೆ ಪ್ರಖರವಾದ್ದು.

ಕೆಲವೊಮ್ಮೆ ಸತ್ಯವನ್ನು ನಮಗೆ ಅರಗಿಸಿಕೊಳ್ಳಲು ಕಷ್ಟವಾಗುತ್ತದೆ. "ಖಂಡಿತವಾದೀ ಲೋಕವಿರೋಧಿ" ಎಂಬ ಗಾದೆಯಿದೆ. ಆದರೂ ಆ ನಿಷ್ಠುರತೆಯನ್ನೂ ಕೂಡಿದಮಟ್ಟಿಗೆ ಕಳೆದುಹಾಕಿ ಸೌಮ್ಯರೂಪದಲ್ಲಿ ಸತ್ಯವನ್ನು ತೋರಿಸುವುದು ಸಂಸ್ಕೃತಿಯ ಸಾರ. ಶುದ್ಧ ಸತ್ಯ ಕಹಿಗುಳಿಗೆಯಂತೆ. ವೈದ್ಯನಾದವನು ಆ ಗುಳಿಗೆಯನ್ನು ಹಾಗೆಯೇ ತಿನ್ನಿಸುವುದಿಲ್ಲ. ಅದಕ್ಕೆ ಸಕ್ಕರೆ ಲೇಪ ಮಾಡಿ ಗುಳಿಗೆಯ ಕಹಿಯನ್ನು ಕಡಿಮೆ ಮಾಡಿ ರೋಗಿಗೆ ಕೊಡುತ್ತಾನೆ. ಹೀಗೆ ಸತ್ಯದ ಕಹಿಯನ್ನು ಸಿಹಿಯಾಗಿ ಪರಿವರ್ತಿಸುವುದು ಸಂಸ್ಕೃತಿಯ ಕೆಲಸ.

ಸತ್ಯವನ್ನು ಬಿಟ್ಟು ಜಗತ್ತಿನಲ್ಲಿ ಬದುಕುವುದಕ್ಕೆ ಸಾಧ್ಯವಿಲ್ಲ. ಕಳ್ಳತನ ಮಾಡಿ ಬದುಕುವ ದುಷ್ಟರಲ್ಲೂ ಕೂಡಾ ಕದ್ದ ಮಾಲನ್ನು ಪಾಲು ಮಾಡುವಾಗ ಸತ್ಯ ಬೇಕಾಗುತ್ತದೆ.

ಸತ್ಯದ ಸಂಬಂಧದ ಮಹಾತ್ತ್ವಪೂರ್ಣ ವಿಚಾರ ಏನೆಂದರೆ ಸತ್ಯದ ಸ್ವಾನುಭವ. ಇದಾದಾಗ ಮಾತ್ರ ಅದು ಸತ್ಯವಾಗುವುದು. ಸತ್ಯವನ್ನು ಒಬ್ಬ ವ್ಯಕ್ತಿ ಇನ್ನೊಬ್ಬ ವ್ಯಕ್ತಿಗೆ ಕೊಡಲಾಗುವುದಿಲ್ಲ. ಸತ್ಯ ಎರವಲು ಪಡೆಯುವ ವಿಚಾರವೂ ಅಲ್ಲ, ಕದಿಯಬಹುದಾದ ವಸ್ತುವೂ ಅಲ್ಲ. ಸತ್ಯವು ಒಂದು ಅದ್ಭುತ ಸಂಪತ್ತು. ಸತ್ಯವನ್ನು ಸ್ವಯಂ ಹೊಂದಬಹುದಲ್ಲದೆ,

ಅದಕ್ಕೆ ಬೇರಾದ ದಾರಿಯೂ ಇಲ್ಲ.

ಒಂದು ರಾಜ್ಯದಲ್ಲಿ ಯುವಕನೋರ್ವ ಅತ್ಯಂತ ಶೂರ-ವೀರತ್ವಕ್ಕೆ ಹೆಸರುಗಳಿಸಿದ್ದ. ಆತ ಸಾಹಸಪೂರ್ಣ ಕಾರ್ಯಗಳಲ್ಲಿ ಆ ರಾಜ್ಯದ ರಾಜನ ಮೆಚ್ಚುಗೆಯನ್ನು ಪಡೆದಿದ್ದ. ಒಮ್ಮೆ ಆ ರಾಜ ತನ್ನ ಸಭೆಯಲ್ಲಿ ಹೇಳಿದ- ' ನನ್ನ ರಾಜ್ಯದ ಉತ್ಕೃಷ್ಟ ಪದವಿಯನ್ನು ಅಧಿಕಾರವನ್ನು ಆ ಯುವಕನಿಗೆ ಕೊಡುವೆ' ಎಂದು.

ಇಂಥ ಉತ್ಕೃಷ್ಟ ಪದವಿಯ ಸಮ್ಮಾನದ ಘಟನೆ ಆ ರಾಜ್ಯದಲ್ಲಿ ಬಹಳ ಕಾಲದಿಂದ ಘಟಿಸಿರಲಿಲ್ಲ. ಆದರೆ ಆ ಯುವಕ ಇದರ ಬಗ್ಗೆ ಉತ್ಸಾಹಿತನಾಗಲಿಲ್ಲ. ಈ ವಿಷಯವನ್ನು ಜನ ರಾಜನಿಗೆ ತಲುಪಿಸಿದರು. ಆಗ ರಾಜನೇ ಆ ಯುವಕನನ್ನು ತನ್ನ ಅರಮನೆಗೆ ಆಹ್ವಾನಿಸಿ ಕೇಳಿದ: "ಏನಿದು ಸಮಾಚಾರ, ಮುನ್ನೂರು ವರ್ಷಗಳಿಂದ ಯಾರಿಗೂ ದೊರಕದ ಸಮ್ಮಾನ, ಪದವಿ ನಿನಗೆ ನಾನು ಕೊಡುತ್ತಿರುವೆ ಎಂದು ತಿಳಿದಾಗ ನೀನು ಇದರಿಂದ ಹರ್ಷಿತನಾಗಲಿಲ್ಲ ಎಂದರೇನು?"

ಆ ಯುವಕ ಹೇಳಿದ: "ನನಗೆ ಧನ ಬೇಡ, ಪದವಿ ಬೇಡ, ಯಶಸ್ಸು ಗೌರವ ಬೇಡ, ಆದರೆ ನಾನು ಬೇರೇನನ್ನೊ ಬೇಡುವೆ; ಅದನ್ನು ಪಡೆಯಲಿಕ್ಕಾಗಿ ರಾಜ್ಯವನ್ನು ಕೊಡಲಾದಲ್ಲಿ ನಾನಾಗ ಕೃತಕೃತ್ಯನಾಗುವೆ."

ರಾಜ ಹೇಳಿದ: " ನೀನು ಏನು ಕೇಳಿದರೂ ನಾನು ನಿನಗೆ ಅದನ್ನು ಕೊಡುವೆ. ಇಡೀ ರಾಜ್ಯದ ಶಕ್ತಿ ಬೇಕಾದರೂ ಅದಕ್ಕಾಗಿ ನಾನು ಕೊಡುವೆ"-ಎಂದು.

ಯುವಕ ಹೇಳಿದ: "ನನಗೆ ಬೇಕಾಗಿರುವುದು ಸತ್ಯ."

ಆ ಯುವಕನ ಮಾತು ಕೇಳಿ ರಾಜ ಅವಾಕ್ಕಾದ! ಅನಂತರ ಹೇಳಿದ: "ನನ್ನನ್ನು ಕ್ಷಮಿಸು, ನಿನಗಿದನ್ನು ಕೊಡಲು, ಅದು ನನ್ನ ಬಳಿ ಇಲ್ಲವು ಇಲ್ಲ. ಸ್ವತಃ ನನಗೇ ಸತ್ಯದ ಅನುಭವ ಎಂಬುದು ಬಲು ದೂರದ ಮಾತಾಗಿ ಉಳಿದಿರುವುದು. ಅಷ್ಟೆ ಅಲ್ಲ, ನನ್ನ ರಾಜ್ಯದ ಪೂರ್ತಿ ಶಕ್ತಿ, ಸಂಪತ್ತು ಕೊಟ್ಟರೂ ಸತ್ಯವನ್ನು ಖರೀದಿಸಲು ಸಾಧ್ಯವಿಲ್ಲ. ರಾಜ್ಯದ ಶಕ್ತಿ, ಸಂಪತ್ತಿನಿಂದ ಸತ್ಯವನ್ನು ಖರೀದಿಸಬಹುದಾಗಿದ್ದರೆ, ಸತ್ಯಕ್ಕಾಗಿ ಇವೆಲ್ಲವನ್ನೂ ತೊರೆದು ಹೋದವರು ಮೂರ್ಖರೇ ಆಗಿರಬೇಕು. ಸಂಪತ್ತಿನಿಂದ ಸತ್ಯವನ್ನು ಹೊಂದಲಾಗುವುದು ಎಂದು ಯಾರು ತಿಳಿಯುವರೋ ಅವರು ಮೂರ್ಖರೇ. ಸತ್ಯವನ್ನು ನಿಜವಾಗಿ ಬೇಡಿ ಪಡೆಯಬಹುದಾಗಿದ್ದಿದ್ದರೆ, ಯಾರೂ ತಪಶ್ಚರ್ಯದಲ್ಲಿ ಆಗಲಿ ಸಾಧನೆಯಲ್ಲಾಗಲಿ ತೊಡಗುತ್ತಿರಲಿಲ್ಲ. ಆ ಶಿಕ್ಷಣವು ಬೇಡುವ ವಿಷಯವಲ್ಲ. ಆದ್ದರಿಂದ ಸತ್ಯವನ್ನು ಕೊಡಲು ಯಾರಿಂದಲಾದರೂ ಸಾಧ್ಯ ಇರುವುದು, ಎಂದು ನನಗೆಲ್ಲು ಕಾಣುತ್ತಿಲ್ಲ! ಹೀಗಿರುವಾಗ ಹೇಗೆ ತಾನೆ ಸತ್ಯವನ್ನು ನಿನಗೆ ಕೊಡಲಾಗುವುದು?"

ರಾಜನು ಮುಂದುವರಿಸಿ ಹೇಳಿದ: "ನನಗೆ ತಿಳಿದಂತೆ ಬೆಟ್ಟದ ತಪ್ಪಲಿನಲ್ಲಿ ಇರುವ ಸಂತರೊಬ್ಬರಿಗೆ ಸತ್ಯದ ಸ್ವಾನುಭವ ಆಗಿದೆ. ಅವರ ಬಳಿ ನಾನು ನಿನ್ನ ಪರವಾಗಿ ಶಿರಬಾಗಿ ಪ್ರಾರ್ಥಿಸುವೆ." ಅನಂತರ ರಾಜ ಮತ್ತು ಸಾಹಸಿ ಯುವಕ ಆ ಸಂತರ ಬಳಿ ಹೋದರು. ರಾಜನು ಸಂತರಿಗೆ ಹೇಳಿದ: "ಸ್ವಾಮಿ, ನಾನು ಈ ಯುವಕನಿಗೆ ಹೇಳಿದೆ, ನೀನೇನು ಕೇಳಿದರೂ ನಾನು ಅದನ್ನು ಕೊಡುವೆ ಎಂದು. ಆದರೇನು ಮಾಡಲಿ, ಈ ಯುವಕ ನನ್ನ ಬಳಿ ಇಲ್ಲದ ಆ ಸತ್ಯವನ್ನು ಕರುಣಿಸು ಎಂದು ಕೇಳುತ್ತಿದ್ದಾನೆ.

ಏನು ಮಾಡುವುದೆಂದು ತಿಳಿಯದೆ ನಿಮ್ಮ ಬಳಿ ಕರೆದುಕೊಂಡು ಬಂದೆ."

ಈ ಮಾತನ್ನು ಕೇಳಿದ ಸಂತರು ಒಂದು ಕ್ಷಣ ಮೌನವಾಗಿದ್ದು ನಂತರ ಹೇಳಿದರು: "ಸತ್ಯ ಎಂಬುದು ಅಂಥ ಪರಮತತ್ತ್ವ, ಅದನ್ನು ಯಾರಿಂದಲೂ ಯಾರಿಗೂ ರವಾನಿಸಲು ಆಗುವುದಿಲ್ಲ. ಯಾವಾಗ ಸತ್ಯವನ್ನು ಕೊಡಲು ಆಗುವುದೋ ಅಂದು ಅದು ಸತ್ಯ ಆಗಿರುವುದಿಲ್ಲ."

"ಸತ್ಯವನ್ನು ತಿಳಿಯುವುದಕ್ಕೆ ಬೇಕಾದದ್ದು ವಿದ್ವತ್ತಲ್ಲ, ಮಗುವಿನ ಹೃದಯ" ಎಂಬುದಾಗಿ ಡಾ । ಎಸ್. ರಾಧಾಕೃಷ್ಣನ್ ಹೇಳಿದ್ದಾರೆ. ಸಂಸ್ಕೃತ ಭಾಷೆಯಲ್ಲಿ 'ಸತ್' ಎಂದರೆ (೧) ಇರತಕ್ಕದ್ದು, (೨) ಒಳ್ಳೆಯದು ಎಂದು ಎರಡರ್ಥ. ಯಾವುದು ಅಳಿಯದೆ ಬಾಳಬಲ್ಲದೋ ಅದೇ ನಿಜವಾಗಿ ಒಳ್ಳೆಯದು. ಅದೇ ಸತ್ಯ. ಯಾವುದು ಹಿಂದೆ ಇತ್ತೋ, ಇಂದು ಇದೆಯೋ, ಇನ್ನು ಮುಂದೆಯು ಇರುತ್ತದೋ-ಅದನ್ನೇ ಸತ್ಯ ಎನ್ನುತ್ತೇವೆ. ಅಸತ್ಯ ಎಂದರೆ ಯಾವುದು ನಿನ್ನೆ ಇರಲಿಲ್ಲವೋ, ಇಂದು ಇದೆಯೆನಿಸಿದೆಯೋ, ನಾಳೆ ಪುನಃ ಇಲ್ಲವಾಗುವುದೋ ಅದು.

ನಿನ್ನೆ ಇಲ್ಲದಿದ್ದಾಗ, ನಾಳೆ ಇರುವುದಿಲ್ಲವಾದಾಗ ಇಂದು ಇರುವುದಾದರು ಹೇಗೆ? ಎರಡು ಇಲ್ಲವುಗಳ ನಡುವೆ ಕೊಂಚಕಾಲ ಇರುವಿಕೆಯ ಭ್ರಮೆಯೇ ಅಸತ್ಯ. ಕೆಲವೊಮ್ಮೆ ಈ ಭ್ರಮೆಯನ್ನೇ ನಾವು ಸತ್ಯ ಎಂಬುದಾಗಿ ನಂಬುತ್ತೇವೆ. ಅಸತ್ಯಕ್ಕೆ ಇನ್ನೊಂದು ಹೆಸರೇ ಮಾಯೆ.

ನಾವೆಲ್ಲರೂ ಈ ಮಾಯಾಜಗತ್ತಿನಲ್ಲಿ ಬದುಕುತ್ತಿದ್ದೇವೆ. ಈ ಅರ್ಥದಲ್ಲಿಯೇ ಶಂಕರಾಚಾರ್ಯರು 'ಬ್ರಹ್ಮ ಸತ್ಯಂ ಜಗನ್ಮಿಥ್ಯಾ' ಎಂದು ಹೇಳಿದುದು. ಈ ಜಗತ್ತು ಎರಡು ಇಲ್ಲವುಗಳ ನಡುವೆ ಕೊಂಚ ಇರುವಿಕೆಯ ಸಂಗತಿ, ಯಾವುದೆಲ್ಲವೂ ಕ್ರಮೇಣ ನಾಶವಾಗುತ್ತದೋ ಅದನ್ನು ಸತ್ಯವೆಂದು ಹೇಳಲಿಕ್ಕಾಗುವುದಿಲ್ಲ. ಯಾವುದು ಸದಾ ಇರುತ್ತದೋ, ಯಾವುದು ನಿತ್ಯ ನಿರಂತರವೋ, ಅದನ್ನೇ ಸತ್ಯ ಎನ್ನುವುದು. ಈ ಜಗತ್ತು ಮಿಥ್ಯೆ ಇರಬಹುದು; ಆದರೆ ಈ ಜಗತ್ತಿನ ನಿರ್ಮಾತ ಬ್ರಹ್ಮನು ಸತ್ಯ. ಆತ ಸದಾ ಎಂದೆಂದಿಗೂ ಇರುವ ಶಾಶ್ವತವಾದ ಶಕ್ತಿ. ಈ ಶಕ್ತಿಯನ್ನೆ ಪರಮಾತ್ಮ, ಪ್ರಕೃತಿ, ಬ್ರಹ್ಮ, ದೇವರು ಇತ್ಯಾದಿ ಹೆಸರುಗಳಿಂದ ಕರೆದರು.

ಋಷಿಮುನಿಗಳು ಸತ್ಯದ ಶೋಧನೆಗಾಗಿ, ಸಾಕ್ಷಾತ್ಕಾರಕ್ಕಾಗಿ ಎಲ್ಲ ಐಹಿಕ, ಲೌಕಿಕ, ಭೌತಿಕ ಸುಖಗಳನ್ನು ತೊರೆದರು. ಕಷ್ಟ, ದಾರಿದ್ರ್ಯ ಹಾಗೂ ಮೃತ್ಯುವನ್ನು ಸ್ವೀಕರಿಸಿದರೇ ವಿನಾ ಸತ್ಯದ ಶೋಧವನ್ನು ಬಿಡಲಿಲ್ಲ. ಯಾವ ಎತ್ತರಕ್ಕೆ ಏರಿದರೆ ಅಲ್ಲಿಂದ ಮನುಷ್ಯ ಮತ್ತೊಮ್ಮೆ ಕುಸಿಯಲಾರನೊ ಅಂತಹ ಎತ್ತರಕ್ಕೆ ಏರಿದವರು ಅವರು. ಅವರು ಏರಿದ ಎತ್ತರದಿಂದ ಪುನಃ ಜಾರದೆ ಇರುವುದಕ್ಕೆ, ಅಲ್ಲಿಯೇ ಶಾಶ್ವತವಾಗಿ ನಿಲ್ಲುವುದಕ್ಕೆ ಕಾರಣ ಸತ್ಯದ ಸಾಕ್ಷಾತ್ಕಾರ.

ಆತ್ಮದ ಸಾಕ್ಷಾತ್ಕಾರಕ್ಕಾಗಿ ಬೇರೆ ಯಾವ ಅಡ್ಡದಾರಿಯೂ ಇಲ್ಲ. ಸತ್ಯದ ದಾರಿ ಗೆಲವಿನ ದಾರಿ, ಮುಕ್ತಿಯ ದಾರಿ. ಅದಕ್ಕಾಗಿಯೇ ನಮ್ಮ ಹಿರಿಯರು ಹೇಳಿದರು- "ಸತ್ಯಮೇವ ಜಯತಿ" ಎಂಬುದಾಗಿ. (ಸಾಭಾರ : ಉತ್ಥಾನ)

* * *

ಜನಪದ ಧ್ವನಿ

ಮಂತ್ರಿವರ್ಯರ ಅಮಾನವೀಯತೆ

೨೦೦೮ ಮೇ ಮೂರನೆ ತಾರೀಖು ಕೇಂದ್ರ ಸರ್ಕಾರವು ಅಂಗವಿಕಲರ ಹಕ್ಕುಗಳ ಬಗ್ಗೆ ವಿಶ್ವರಾಷ್ಟ್ರ ಸಂಸ್ಥೆಯ ಸಭೆಯ ತೀರ್ಮಾನವನ್ನು ಅಂಗೀಕರಿಸುತ್ತಿರುವ ಸಮಯದಲ್ಲಿಯೆ ಭಾರತದಲ್ಲಿ ಅಂಗವಿಕಲರ ನೈಜ ಪರಿಸ್ಥಿತಿ ಅನಾವರಣಗೊಳ್ಳುತ್ತಿತ್ತು. ಬೆಂಗಳೂರಿನಲ್ಲಿ ಜೂನ್ ೨೮ ರಂದು ಅಂಗವಿಕಲರ ಬಗ್ಗೆ ಅಮಾನವೀಯತೆಯ ಘಟನೆಗೆ ನಾನು ಸಾಕ್ಷಿಯಾಗಿದ್ದೆ. ತೊದಲು ಮಾತಿನ, ದೈಹಿಕ ಮತ್ತು ಮಾನಸಿಕ ತೊಂದರೆಯ ವ್ಯಕ್ತಿಯೊಬ್ಬ ಐಟಿ-ಬಿಟಿ ಮತ್ತು ಅಬಕಾರಿ ಮಂತ್ರಿ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಅವರನ್ನು ಭೇಟಿ ಮಾಡುವುದಕ್ಕಾಗಿ ಕಾಯುತ್ತಿದ್ದ. ತನ್ನ ಜೀವನ ನಿರ್ವಹಣೆಗಾಗಿ ಒಂದು ದೂರವಾಣಿ ಕೇಂದ್ರದ ಸ್ಥಾಪನೆಗಾಗಿ ಮಂತ್ರಿಯವರ ಸಹಾಯ ಕೋರಲು ಬಯಸಿದ್ದ. ಎರಡು ದಿನಗಳಿಂದ ಮಂತ್ರಿಯವರನ್ನು ಭೇಟಿ ಮಾಡಲು ಠಿಕಾಣಿ ಹೂಡಿದ್ದ ಆ ಮನುಷ್ಯನನ್ನು ಒಳಗೆ ಮಂತ್ರಿ ಮನೆಯ ಕಾವಲು ಪೋಲೀಸರು ಬಿಡಲಿಲ್ಲ. ಅವನು ಮಂತ್ರಿಯವರ ಭೇಟಿಯಿಲ್ಲದೆ ಹೋಗಲು ನಿರಾಕರಿಸಿದಾಗ ಮೂರು-ನಾಲ್ಕು ಜನ ಪೋಲೀಸರು ಹಾಡು ಹಗಲಿನಲ್ಲಿಯೆ ಅಮಾನುಷವಾಗಿ ಅವನನ್ನು ಬೆತ್ತದಿಂದ ಹೊಡೆದು ತಮ್ಮ ಬೂಟುಗಳಿಂದ ಒದ್ದರು. ಆ ಅಂಗವಿಕಲ ಮನುಷ್ಯ ನೋವಿನಿಂದ ಕಿರುಚುತ್ತಿದ್ದ. ಮತ್ತು ಅವನ ಸೈಕಲ್ ಕೂಡ ಜಖಂ ಗೊಂಡಿತು. ಜನರಿಂದ ಚುನಾಯಿತನಾದ ಮಂತ್ರಿಯನ್ನು ಭೇಟಿ ಮಾಡಲು ಬಯಸಿದ್ದೇ ಅವನ ಮೇಲಿನ ಈ ದೌರ್ಜನ್ಯಕ್ಕೆ ಕಾರಣವಾಗಿತ್ತು. ಪೋಲೀಸರು ಅವನನ್ನು ಪ್ರಾಣಿಗಿಂತ ಕಡೆಯಾಗಿ ಕಂಡರು. ಪಕ್ಕದ ಅಪಾರ್ಟ್‌ಮೆಂಟ್‌ನಲ್ಲಿಯ ಕೆಲವು ಜನರು ಕೆಳಗಿಳಿದು ಬಂದು ಮೇಲಧಿಕಾರಿಗಳಿಗೆ ಈ ವಿಷಯವನ್ನು ತಿಳಿಸುತ್ತೇವೆಂದು ಗದರಿಸಿದ ಮೇಲೆಯೇ ಈ ಹಿಂಸಾಚಾರ ನಿಂತಿತು. ಅಂತಿಮವಾಗಿ ಮಂತ್ರಿಯ ಖಾಸಗಿ ಸಹಾಯಕ ಆ ಮನುಷ್ಯನನ್ನು ಪಕ್ಕಕ್ಕೆ ಕರೆದುಕೊಂಡು ಹೋದ ಮತ್ತು ದೂರವಾಣಿ ಕೇಂದ್ರದ ಶಿಫಾರಸ್ಸಿಗಾಗಿ ಪತ್ರವನ್ನು ಕೊಟ್ಟ, ಕೊನೆಗೂ ಮಂತ್ರಿವರ್ಯರು ಅವನು ಭೇಟಿಗೆ ತಕ್ಕವನಲ್ಲವೆಂದೇ ಭಾವಿಸಿದರು. ಭಾರತವು ಅಂಗವಿಕಲರ ಹಕ್ಕುಗಳ ರಕ್ಷಣೆಗೆ ವಿಶ್ವಸಂಸ್ಥೆಯ ತೀರ್ಮಾನಕ್ಕೆ ಬದ್ಧತೆಯನ್ನು ತೋರಿಸುವ ಕೆಲವೇ ರಾಷ್ಟ್ರಗಳಲ್ಲಿ ಒಂದಾಗಿತ್ತು. ವಿಶ್ವಸಂಸ್ಥೆಯ ನಿರ್ಣಯ ಅಂಗವಿಕಲರ ಹಕ್ಕುಗಳ ರಕ್ಷಣೆಯಲ್ಲಿ ಮುಖ್ಯವಾದ ಮೈಲಿಗಲ್ಲಾಗಿದೆ. ಸಂಸತ್ತು ಕೂಡ ೧೯೯೫ ರಲ್ಲಿ ಅಂಗವಿಕಲರ ಹಕ್ಕುಗಳನ್ನು ಶಾಸನಬದ್ಧವಾಗಿ ಅಂಗೀಕರಿಸಿದೆ. ಅಂಗವಿಕಲರಲ್ಲಿ ಮುಖ್ಯವಾಗಿ ಮಾನಸಿಕವಾಗಿ ಮತ್ತು ಬೌದ್ಧಿಕವಾಗಿ ತೊಂದರೆಗೊಳಗಾಗಿರುವವರನ್ನು ಮಾನವೀಯತೆಯ ದೃಷ್ಟಿಯಿಂದ ನೋಡಲಾಗುತ್ತಿಲ್ಲವೆಂಬುದನ್ನು ಈ ಘಟನೆ ತೋರಿಸುತ್ತದೆ. ಭಾರತದ ಸಂವಿಧಾನದ ೧೪ ಮತ್ತು ೨೧ರ ವಿಧಿಯ ಮೇರೆಗೆ ಪ್ರಜೆಗಳಿಗೆ ಸಮಾನತೆಯ ಮತ್ತು ಜೀವದ ಮತ್ತು ವ್ಯಕ್ತಿ ಸ್ವಾತಂತ್ರ್ಯದ ಹಕ್ಕನ್ನು ಕೊಡುತ್ತವೆ. ವಿಶ್ವಸಂಸ್ಥೆಯ ನಿರ್ಣಯಕ್ಕೆ ಭಾರತ ಸರ್ಕಾರ ಅಂಗವಿಕಲರ ಬಗ್ಗೆ ಒದಗುವ ಯಾವುದೇ ತಾರತಮ್ಯತೆಯನ್ನು ತೋರಿಸಬಾರದೆಂಬುದಕ್ಕೆ ಬದ್ಧವಾಗಿದೆ. ಮೇಲ್ಕಾಣಿಸಿದ ಘಟನೆಗಳನ್ನು ನೋಡಿದಾಗ ಸರ್ಕಾರದ ಬದ್ಧತೆಗಳನ್ನು ಯಾವ ಸಂಕೋಚವಿಲ್ಲದೆ ಉಲ್ಲಂಘಿಸಲಾಗುತ್ತಿದೆಯೆಂಬುದು ಗೊತ್ತಾಗುತ್ತದೆ. ಮಂತ್ರಿಯ ನಿವಾಸದ ಹೊರಗೆ ಸರ್ಕಾರದ ಅಧಿಕಾರಿಗಳ ವರ್ತನೆಯನ್ನು ನೋಡಿದಾಗಲಂತೂ ಅಂಗವಿಕಲರ ಹಕ್ಕುಗಳ ಪಾಲನೆ ಕೇವಲ ನಾಟಕೀಯವೆಂದು ಕಂಡು ಬರುತ್ತದೆ.

– ಜೈನಾ ಕೊಠಾರಿ

ಇಂದು ವ್ಯಕ್ತಿಗತ ಸಾಧನೆಗಿಂತ ಸಮೂಹ ರೂಪದ ಸಾಧನೆ ಬೇಕು

– ವಿನೋಬಾ

ಶತಂ ವೈಖಾನಸಾಃ

ವೇದದಲ್ಲಿ ಒಂದು ಸೂಕ್ತವಿದೆ. ಅದರ ಋಷಿ ಶತಂ ವೈಖಾನಸಾಃ. ಅರಣ್ಯದಲ್ಲಿ ತಪಸ್ಸು ಮಾಡುವವರಿಗೆ ವೈಖಾನಸ ಎನ್ನುತ್ತಾರೆ. ಅರಣ್ಯದಲ್ಲಿ ನಗ್ನರಾಗಿ ತಪಸ್ಸು ಮಾಡುವ ಋಷಿಗಳಿದ್ದರು. ಶತಂ ವೈಖಾನಸ ಎಂಬುವನು ಒಬ್ಬ ಋಷಿ ಅಲ್ಲ. ಇದರ ಅರ್ಥ ಒಬ್ಬ ಮನುಷ್ಯನಿರುತ್ತಾನೆ. ಅವನು ಸೂಕ್ತಗಳನ್ನು ರಚಿಸುತ್ತಾ ಹೋಗುತ್ತಾನೆ. ಉಳಿದ ಜನರು ಕುಳಿತುಕೊಂಡಿರಬಹುದು, ಚರ್ಚೆ ಮಾಡುತ್ತಿರಬಹುದು, ಅರ್ಥ ಮಾಡುತ್ತಿರಬಹುದು, ಅವಶ್ಯಕ್ಕನುಸಾರವಾಗಿ ಬದಲಾವಣೆ ಆಗುತ್ತಿರಬಹುದು – ಸಾಮೂಹಿಕ ಸೂಕ್ತವು ಎಲ್ಲ ಋಷಿಗಳ ಸಹಾಯದಿಂದ ರಚಿತವಾಗುತ್ತಿರಬಹುದು. ಪ್ರಾಚೀನ ಕಾಲದಲ್ಲಿ ಋಷಿಗಳು ಸಾಮೂಹಿಕ ಸಾಧನೆ ಮಾಡಿರಬಹುದು. ನೂರು ತಪಸ್ವಿಗಳು ಕೂಡಿ ಸೂಕ್ತ ರಚಿಸಿದರು. ೨೫–೩೦ ಮಂತ್ರಗಳ ಸೂಕ್ತ. ಹಾಗೆಯೇ ವೇದದಲ್ಲಿ ಮೂರು ಮಂತ್ರಗಳ ಒಂದು ಸೂಕ್ತ ಕೂಡ ಇದೆ. ಈ ಮೂರು ಮಂತ್ರಗಳ ಋಷಿ ಸಹಸ್ರಂ ವಸುರೋ ಚಸಿಃ. ಋಷಿಗಳನ್ನು ದ್ರಷ್ಟಾರರೆಂದು ತಿಳಿಯಲಾಗುತ್ತದೆ. ಆದರೆ ಮೂರು ಮಂತ್ರಗಳಿಗೆ ಸಾವಿರ ಲೇಖಕರು ಹೇಗೆ ಇರಲು ಸಾಧ್ಯ? ಈ ಕುರಿತು ಆಲೋಚಿಸಿದರೆ ಯಾರೋ ಒಬ್ಬ ನಿಮಿತ್ತ ಮಾತ್ರ ಲೇಖಕ ಇರಬಹುದು. ಅವನಿಗೆ ಅವರು ಮಹತ್ವಕೊಡುತ್ತಿರಲಿಲ್ಲ. ಆದರೆ ಯಾವ ದರ್ಶನವಾಗುತ್ತಿತ್ತೋ ಅದು ಸಾಮೂಹಿಕವೇ ಆಗುತ್ತಿತ್ತು. ನಿಶ್ಚಯವಾಗಿಯೂ ಸಾಮೂಹಿಕ ಸಾಧನೆಯಿಂದ್ಧ ಆ ದರ್ಶನವು ಒಬ್ಬ ಮನುಷ್ಯನಲ್ಲಿ ಪ್ರಕಟಗೊಳ್ಳುತ್ತಿತ್ತು. ಆಗಲೂ ಕೂಡ ಅದು ಒಂದು ದರ್ಶನವಾಗಿರದೆ ಯಾರೆಲ್ಲ ಕೂಡಿ ತಪಸ್ಸು ಮಾಡಿದ್ದರೋ ಅವರದ್ದಾಗಿತ್ತು.

ಪ್ರಾಚೀನ ಪುರಾಣಗಳಲ್ಲಿ ಋಷಿಗಳ ತಪಸ್ಸಿನ ಮಾತು ಬರುತ್ತದೆ. ಇಂಥ ಋಷಿಯು ಸಾವಿರ ವರ್ಷ ಉಪವಾಸ ಮಾಡಿದರು. ಇದರ ಅರ್ಥವೇನು? ಗಾಂಧೀಜಿ ಇಪ್ಪತ್ತೊಂದು ದಿನ ಉಪವಾಸ ಮಾಡಿದ್ದರು. ನಾನು ಕೂಡ ಅವರೊಂದಿಗೆ ಉಪವಾಸ ಮಾಡಿದ್ದೆ. ಆ ಸಮಯದಲ್ಲಿ ನಾನೊಂದು ವಿಚಾರವನ್ನು ಪ್ರಸ್ತಾಪಿಸಿದ್ದೆ. ಗಾಂಧೀಜಿ ಇಪ್ಪತ್ತೊಂದು ದಿನ ಉಪವಾಸ ಮಾಡಿದ್ದರು ಮತ್ತು ಇನ್ನೂ ಸಾವಿರ ಜನರು ಅವರೊಂದಿಗೆ ಉಪವಾಸ ಮಾಡಿದರೆ ಪ್ರಾಚೀನ ಭಾಷೆಯಲ್ಲಿ ಗಾಂಧೀಜಿಯವರು ಇಪ್ಪತ್ತೊಂದು ಸಾವಿರ ಉಪವಾಸ ಮಾಡಿದಂತೆ. ಇಪ್ಪತ್ತೊಂದು ಸಾವಿರ ಜನರು ಮಾಡಿದ ಸಾಮೂಹಿಕ ಉಪವಾಸಕ್ಕೆ ಯಾರ ಪ್ರೇರಣೆಯಾಯಿತೊ ಅದಕ್ಕೆ ಅವರ ಹೆಸರನ್ನು ಸೇರಿಸಲಾಯಿತು.

ಯಾವುದೋ ಒಬ್ಬ ಋಷಿ ಸಾವಿರ ಉಪವಾಸ ಮಾಡಿದ ಎಂದು ಓದಿದಾಗ ನಮಗೆ ಬಹಳ ಆಶ್ಚರ್ಯವೆನಿಸುತ್ತದೆ. ಆದರೆ ಅದರ ಅರ್ಥ ಯಾವ ಋಷಿಯ ಪ್ರೇರಣೆಯಿಂದ ಉಪವಾಸ ಮಾಡಿದರೊ ಅವನ ಹೆಸರಿನಲ್ಲಿ ಎಲ್ಲ ಉಪವಾಸಗಳು ಎಂದು ತಿಳಿಯಲಾಯಿತು. ಈ ಭಾಷ್ಯ ನನಗೆ ಆ ಸಮಯದಲ್ಲಿ ಹೊಳೆಯಿತು. ಹಳೆಯ ಕಾಲದ ಜನರಿಗೆ ದೊಡ್ಡ ದೊಡ್ಡ ಸಂಖ್ಯೆಗಳನ್ನು ಹೇಳುವ ಅಭ್ಯಾಸವಿದೆ. ಅದು ನಮ್ಮ ಉಪಯೋಗಕ್ಕೆ ಬರದ ಸಂಗತಿಯೆಂದು ನಾನು ಭಾವಿಸಿದ್ದೆ. ಆದರೆ ಈ ಸಾಮೂಹಿಕ ಉಪವಾಸದ ಚಿನ್ಹೆ ಇದು ಎಂದು ಗಮನಕ್ಕೆ ಬಂದಿತು. ಶತಂ ವೈಖಾನಸ ಋಷಿ ಹೀಗೆ ಹೇಳುತ್ತಾರೆ, – **ವೃಣೀಮಹೆ ಸಖ್ಯಾಯ ವೃಣೀಮಹೆ ಯುಜ್ಯಾಯ (೯.೩.೧೦)** "ಹೇ ಭಗವಂತ,

ನಾನು ನಿನ್ನ ಉಪಾಸನೆ ಮಾಡಿದ್ದೇನೆ. ಇದರ ಉದ್ದೇಶ ನಮ್ಮ ಜನರಲ್ಲಿ ಪರಸ್ಪರ ಸಖ್ಯವಾಗಲಿ, ಹೊಂದಾಣಿಕೆಯಾಗಲಿ." ಇದು ಸಾಮೂಹಿಕ ಸಾಧನೆಯ ನಿದರ್ಶನ. ನೂರು ಋಷಿಗಳು ಕೂಡಿ ತಪಸ್ಸು ಮಾಡಿದರೂ ಆ ಸಾಧನೆಯಲ್ಲಿ ಈ ಮಂತ್ರದ ದರ್ಶನವಾಯಿತು. ಇದು ಭಗವಂತನನ್ನು ಕುರಿತು ಇರುವ ಪ್ರಾರ್ಥನೆ. ಇದು ಒಬ್ಬನಿಗಾಗಿ ಅಲ್ಲ ಸಮೂಹಕ್ಕಾಗಿ ಇದೆ. ವ್ಯಕ್ತಿಗತ ಸಾಧನೆಯ ದಿನಗಳು ಕಳೆದು ಹೋಗಿವೆ. ಇನ್ನು ಸಮೂಹ ರೂಪದಲ್ಲಿ ಪ್ರಭುಚರಣಗಳವರೆಗೆ ತಲುಪುವುದಿದೆ. ಪರಸ್ಪರರಲ್ಲಿ ಸಖ್ಯವಿಲ್ಲದಿದ್ದರೆ, ಸಂಯೋಗವಿಲ್ಲದಿದ್ದರೆ ನಾವು ಭಗವಂತನ ಬಳಿ ತಲುಪುವುದಾದರೂ ಹೇಗೆ? ಆದ್ದರಿಂದ ಶತಂ ವೈಖಾನಸರ ಪ್ರಾರ್ಥನೆ ಇದಾಗಿದೆ.

ಅಸಿತ – ದೇವಲ – ವ್ಯಾಸ – ನಾರದ

ಅಸಿತ ಮತ್ತು ದೇವಲ ಈ ಇಬ್ಬರು ಋಷಿಗಳ ಸೂಕ್ತಗಳು ವೇದದಲ್ಲಿದೆ. ಗೀತೆಯಲ್ಲಿ ಅಸಿತ, ದೇವಲ, ವ್ಯಾಸ ಮತ್ತು ನಾರದ ಹೀಗೆ ನಾಲ್ಕು ಭಕ್ತಿಯೋಗದ ಆಚಾರ್ಯರ ರೂಪದಲ್ಲಿ ಇವರು ನಿರ್ದಿಷ್ಟರಾಗಿದ್ದರೂ ಕೂಡ ಕ್ರಮಶಃ ಕರ್ಮ, ಭಕ್ತಿ, ಜ್ಞಾನ ಮತ್ತು ಮೋಕ್ಷದ ಪ್ರತಿನಿಧಿಗಳಾಗಿದ್ದಾರೆ. ಆ ಶಬ್ದಗಳ ವ್ಯುತ್ಪತ್ತಿ ನೋಡಿದರೆ ಅದು ಗಮನಕ್ಕೆ ಬರುತ್ತದೆ. ವ್ಯುತ್ಪತ್ತಿ ಎಂದರೆ ವ್ಯಾಕರಣದ ದೃಷ್ಟಿಯಿಂದ ಶಬ್ದವನ್ನು ನೋಡುವುದು. ಸಿತ ಎಂದರೆ ಶ್ವೇತ, ಅಸಿತ ಎಂದರೆ ಕಪ್ಪು; ಯಾವುದು ಶ್ವೇತವಲ್ಲವೊ ಅದು. ಯಾರು ಕೆಲಸ ಮಾಡುತ್ತಾರೋ ಅವರ ಬಟ್ಟೆಗಳು ಮಲಿನವಾಗಿರುತ್ತದೆ. ಆದ್ದರಿಂದ ಅವನನ್ನು ಕರ್ಮದ ಆಚಾರ್ಯ ಎಂದು ಭಾವಿಸಲಾಯಿತು. ದೇವಲ ಎಂದರೆ ಯಾರ ಲಯ, ಗಮನ ಭಗವಂತನ ಕಡೆಗೆ ಇದೆಯೊ ಅದು. ವ್ಯಾಸ ಎಂದರೆ ವಿಸ್ತಾರ. ವೇದಗಳನ್ನು ಅವನು ವಿಭಜನೆ ಮಾಡಿದ. ಯಾವ ವೇದದ ಅಧ್ಯಯನ ಯಾರು ಮಾಡಬೇಕು ಎಂಬುದರ ವ್ಯಾಖ್ಯಾನ ಮಾಡಿದ. ಆದ್ದರಿಂದ ಈತನನ್ನು ವೇದವ್ಯಾಸನೆನ್ನುತ್ತಾರೆ. ವೇದಗಳ ವಿಭಜನೆ ವ್ಯಾಸನ ಒಂದು ದೊಡ್ಡ ಉಪಕಾರ. ನಾರದ ಮೋಕ್ಷದ ಪ್ರತಿನಿಧಿ. ನಾರ ಎಂದರೆ ಮುಕ್ತಿ, ದ ಎಂದರೆ ಕೊಡುವವನು. ಮುಕ್ತಿ ಕೊಡುವವನು ನಾರದ. ಕರ್ಮ, ಜ್ಞಾನ, ಭಕ್ತಿಗಳನ್ನು ತ್ರಿಕಾಂಡ ವೇದವೆನ್ನುತ್ತಾರೆ. ಈ ಮೂರು ಸಿದ್ಧಾಂತಗಳು. ಇವುಗಳ ಪರಿಣಾಮ ಮೋಕ್ಷ.

ಉಷನಾ

ಉಷನಾ ಶಬ್ದ ವಶ್ ಅಂದರೆ ಪ್ರೇಮಿಸುವುದು ಎಂಬ ಧಾತುವಿನಿಂದ ರಚಿತವಾಗಿದೆ. ಭಕ್ತಿ ಪ್ರೇಮದ ಗೀತೆಯನ್ನು ಹಾಡುವ ಈ ಕವಿ ಆದರ್ಶಕವಿ. ವೇದಗಳಿಗಾಗಿಯೂ ಅದು ಸ್ಮರಣೀಯವಾಗಿದೆ. **ಪ್ರ ಕಾವ್ಯಂ ಉಷನೇವ ಭೂವಾಣಃ** ಈ ಪ್ರಕಾರ ಕಾವ್ಯವನ್ನು ಹೇಳುವವ ಎಂಬುದಾಗಿ ಅವನ ಸ್ಮರಣೆ ಇದೆ. ವೇದದಲ್ಲಿ ಉಷನಾನ ಸೂಕ್ತಗಳಿವೆ. ಅವನು ಅರ್ವಾಚೀನ ಉಷನಾ. **ಅಹಂ ಕವಿರೂಶನಾ ಪಶ್ಯತಾ ಮಾ** (೪.೨.೧೨). ಉಷನಾ ಕವಿ ನಾನು. ನನ್ನನ್ನು ನೋಡಿ. ವೇದಗಳ ಸ್ಮರಣೆಯನ್ನು ಮಾಡಿದ ಅವ ಪ್ರಾಚೀನ ಉಷನಾ. ಅವನ ಕಾವ್ಯ ಉಪಲಬ್ಧವಿಲ್ಲ.

ಘೋಷಾ

ಘೋಷಾ ಎಂಬ ಓರ್ವ ಮಹಿಳೆಯಿದ್ದಳು. ಅವಳಿಗೆ ಕುಷ್ಠರೋಗವಾಗಿತ್ತು. ಆ ರೋಗಕ್ಕೆ ಅರ್ಜುನ ಎಂಬ ಹೆಸರನ್ನು ಕೊಡಲಾಗಿದೆ. ಈಗ ಅದು ಲೆಪ್ರಿಸಿಯೋ ಅಥವಾ ಯುಕೊಡರ್ಮ (ಬಿಳಿಕಷ್ಠ) ವೋ ಗೊತ್ತಿಲ್ಲ. ಘೋಷಾ ಆಶ್ವಿನ ಕುಮಾರರಲ್ಲಿ ಪ್ರಾರ್ಥನೆ ಮಾಡಿದಳು. ಅವರ ಕೃಪೆಯಿಂದ ಅವಳ ರೋಗ ಗುಣವಾಯಿತು. ಅಶ್ವಿನಿ ಕುಮಾರರನ್ನು ದೇವತೆಗಳ ವೈದ್ಯರೆಂದು ತಿಳಿಯಲಾಗುತ್ತದೆ. ಘೋಷಾ ಅವನ ಪ್ರಾರ್ಥನೆ ಮಾಡಿದುದರ ಅರ್ಥ ಸರಳವಾಗಿದೆ. ಸ್ವಲ್ಪ ಔಷಧಿಯನ್ನೂ ಕೊಟ್ಟಿರಬಹುದು ಮತ್ತು ಜೊತೆಗೆ

ಪ್ರಾರ್ಥನೆಯನ್ನೂ ಜೋಡಿಸಿರಬಹುದು. ಎರಡೂ ಸೇರಿ ರೋಗ ಗುಣವಾಯಿತು. ಹೀಗೆ ಅದರ ಅರ್ಥವಾಗಲು ಸಾಧ್ಯ.

ನಾನು ಒಂದು ಕುಷ್ಠಧಾಮಕ್ಕೆ ಹೋಗಿದ್ದೆ. ಅಲ್ಲಿ ಒಂದು ವಾಕ್ಯ ಬರೆದಿಟ್ಟಿದ್ದಾರೆ. "ವೈದ್ಯರಾದ ನಾವು ಔಷಧಿ ಕೊಡುತ್ತೇವೆ. ಆದರೆ ಭಗವಂತನು ರೋಗವನ್ನು ಗುಣಪಡಿಸುತ್ತಾನೆ." ಈ ವಾಕ್ಯವನ್ನು ನಾನು ಓದಿದಾಗಿನಿಂದ ಎಂದೂ ಮರೆತಿಲ್ಲ. ಇದು ಸರಿಯಾದ ಮಾತೇ ಆಗಿದೆ. ರೋಗವು ಮುಖ್ಯವಾಗಿ ಪ್ರಾರ್ಥನೆಯಿಂದ ಗುಣವಾಗುತ್ತದೆ. ಯಾವ ಔಷಧೋಪಚಾರವನ್ನು ನಾವು ಮಾಡುತ್ತೇವೋ ಅದು ಸ್ಥೂಲ ಮಾತ್ರ. ಇತ್ತೀಚಿಗೆ ಪ್ರತಿಯೊಂದು ರೋಗದ ನಿವಾರಣೆಯಲ್ಲಿ ಮಾನಸಶಾಸ್ತ್ರದ ಪ್ರಭಾವವಿರುತ್ತದೆ. ಕ್ರಿಸ್ತಾನ ಮಿಷನರಿಗಳು ಕೇವಲ ಔಷಧೋಪಚಾರದ ಮೇಲೆ ವಿಶ್ವಾಸವಿಡದೆ ಪ್ರಾರ್ಥನೆಯಲ್ಲಿ ವಿಶ್ವಾಸವಿಡುತ್ತಾರೆಂಬುದನ್ನು ನಾನು ಗೌರವಿಸುತ್ತೇನೆ. ಅವರು ರೋಗಿಗಳ ಬಳಿ ಕುಳಿತುಕೊಂಡು ಅತ್ಯಂತ ಏಕಾಗ್ರ ಚಿತ್ತದಿಂದ ಪರಮೇಶ್ವರನ ಪ್ರಾರ್ಥನೆ ಮಾಡುತ್ತಾರೆ. ಅಶ್ವಿನಿ ಕುಮಾರನು ಘೋಷಾಳಿಗೆ ಮಧು ವಿದ್ಯೆಯನ್ನು ಕಲಿಸಿದ. ಮಧುವಿದ್ಯೆ ಎಂದರೆ ಬ್ರಹ್ಮವಿದ್ಯೆ. ಅದು ಬಹಳ ಮಧುರವಾಗಿರುತ್ತದೆ. ಅವಳು ರೋಗಮುಕ್ತಳಾದಳು. ಇದರ ಅರ್ಥ ಮೂಲರೋಗವು ಹೋಯಿತೋ ಇಲ್ಲವೊ ಗೊತ್ತಿಲ್ಲ ಆದರೆ ಅಧ್ಯಾತ್ಮಿಕ ದೃಷ್ಟಿಯಿಂದ ಅವಳು ಎತ್ತರಕ್ಕೇರಿದಳು ಮತ್ತು ಮಂತ್ರವನ್ನು ರಚಿಸಿದಳು. ಆ ಮಂತ್ರಗಳು ವೇದಗಳಲ್ಲಿ ಮಾನ್ಯತೆ ಪಡೆದಿವೆ.

ವಾಗಾಂಭೃಣಿ

ಒಂದು ಕಾಲದಲ್ಲಿ ಮಹಿಳೆಯರಿಗೆ ಪೂರ್ಣ ಸ್ವಾತಂತ್ರ್ಯವಿತ್ತು. ಯಾವ ರೀತಿ ಪುರುಷರು ಬ್ರಹ್ಮವಾದಿಗಳಾಗಿ ಹೋದರೋ ಅದೇ ರೀತಿ ಸ್ತ್ರೀಯರೂ ಬ್ರಹ್ಮವಾದಿನಿಗಳಾಗಿದ್ದಾರೆ. ಸ್ತ್ರೀಯರು ರಚಿಸಿರುವ ಕೆಲವು ಸೂಕ್ತಗಳು ವೇದದಲ್ಲಿ ಬರುತ್ತವೆ. ಮೊದಲು ಸ್ತ್ರೀಯರಿಗೆ ವೇದಾಭ್ಯಾಸದ ಅಧಿಕಾರವಿತ್ತು. ವೇದದಲ್ಲಿ ಅಂಭೃಣಿ ಎಂಬ ಋಷಿ ಕನ್ಯೆಯ ಒಂದು ಸೂಕ್ತವಿದೆ. ಅವಳು ಬ್ರಹ್ಮಚಾರಿಣಿ. ಇಂಥ ಅನೇಕ ಬ್ರಹ್ಮವಾದಿನಿ ಸ್ತ್ರೀಯರು ಆಗಿಹೋದರು. ಅವರ ಸೂಕ್ತಗಳು ಕೂಡ ವೇದಗಳಲ್ಲಿ ಬಹು ಪ್ರಸಿದ್ಧವಾಗಿವೆ. ವಾಗಾಂಭೃಣಿ ಭಗವಂತನೊಂದಿಗೆ ಏಕರೂಪವಾದಾಗ ಅವಳು ಭಗವಂತನ ಕೃತಿ ನನ್ನದೆ ಕೃತಿಯಾಗಿದೆ ಎಂದು ಹೇಳುತ್ತಾಳೆ. ಇಷ್ಟೊಂದು ಏಕರೂಪತೆ ಭಗವಂತನೊಂದಿಗೆ ಹೊಂದಿರುತ್ತಾಳೆ. "ಸೃಷ್ಟಿಯ ಎಲ್ಲ ಪ್ರಾಣಿಗಳು ನನ್ನ ಆಶ್ರಮದಲ್ಲಿವೆ. ಆದರೆ ಅದು ಅವುಗಳಿಗೆ ಗೊತ್ತಿಲ್ಲ"ವೆಂದು ವಾಗಾಂಭೃಣಿ ಹಾಡಿದ್ದಾಳೆ. ಎಲ್ಲವೂ ನನ್ನ ಆಧಾರದಿಂದಲೆ ಕೆಲಸ ಮಾಡುತ್ತವೆ. ಹೀಗೆ ಭಗವಂತನೊಂದಿಗೆ ಏಕರೂಪವಾಗಿದ್ದು ಭಗವಂತನ ಎಲ್ಲ ಕರ್ತೃತ್ವವನ್ನು ತನ್ನದೆಂದು ಅವಳು ವರ್ಣನೆ ಮಾಡುತ್ತಾಳೆ. "ಯಾರನ್ನು ಮೇಲ್ಮಟ್ಟಕ್ಕೆ ಒಯ್ಯಬಯಸುತ್ತೇನೊ ಅವರನ್ನು ಎಚ್ಚರಿಸುತ್ತೇನೆ. ಯಾರನ್ನು ಋಷಿ ಮಾಡಬೇಕೆಂದು ಬಯಸುತ್ತೇನೋ ಅವರನ್ನು ಋಷಿ ಮಾಡುತ್ತೇನೆ. ಭಗವಂತನ ಕರ್ತವ್ಯ ನನ್ನ ಕರ್ತವ್ಯವಾಗಿದೆ. **ಯಂ ಕಾಮಯೆ ತಂತಮುಗ್ರಂ ಕೃಣೋಮಿ ತಂ ಬ್ರಮ್ಹಾಣಂ ತಮರ್ಷಿಂ ತಮಂ ಸಮೇಧಾಮ್** (೧೦.೧೭೮.೫) ಅಹಂ ರುದ್ರಾಯ ಧನುರಾ ತನೋಮಿ .... ಶಿವನಿಗೆ ಧನುಸ್ಯವನ್ನು ಕೊಟ್ಟವಳು ನಾನೆ. (೧೦.೧೭೮.೬). ಅಹಂ ರಾಷ್ಟ್ರೀ ಸಂಗಮನೀ ವಸೂನಾಂ (೧೦.೧೭೮.೩) – ನಾನು ರಾಷ್ಟ್ರ ದೇವತೆ. ಇಡೀ ರಾಷ್ಟ್ರದ ವಾಣಿ ಎಲ್ಲರ ಸೌಜನ್ಯವನ್ನು ಸಂಗಮ ಮಾಡುವವಳು. ಜಗತ್ತಿನಲ್ಲೆಲ್ಲ ಎಷ್ಟೊಂದು ಸೌಜನ್ಯ ಪಸರಿಸಿದೆಯೊ ಅದನ್ನು ನಾನೇ ಪಸರಿಸಿದ್ದು.

ಅನು : ಸು.ಕೌ (ಮುಂದುವರಿಯುವುದು...)

* * *

ಜನಪದ ವ್ಯಕ್ತಿ

ಗ್ರೆಗ್ ಮಾರ್ಟಿನ್‌ಸನ್

– ನಿಕೊಲಸ್ ಡಿ. ಕ್ರಿಸ್ಟೋಫ್

ಅಮೇರಿಕಾದ ಅಧ್ಯಕ್ಷ ಜಾರ್ಜ್ ಬುಷ್ ಪಾಕಿಸ್ತಾನದ ಸರ್ವಾಧಿಕಾರಿ ಪರ್ವೇಜ್ ಮುಷರಫ್‌ರವರಿಗೆ ಹತ್ತು ಬಿಲಿಯನ್ ಡಾಲರಿಗಿಂತಲೂ ಹೆಚ್ಚು ಸಹಾಯ ಮಾಡಿದ್ದಾರೆ. ಆದರೆ ಸೈನ್ಯ ಶಕ್ತಿ ಸೋತಿದೆ ಮತ್ತು ಪಾಕಿಸ್ತಾನದ ಆದಿವಾಸಿಗಳು ಎಂದಿಗಿಂತ ಹೆಚ್ಚಾಗಿ ಭಯೋತ್ಪಾದಕರಿಗೆ ಪ್ರೋತ್ಸಾಹಿಸುತ್ತಿದ್ದಾರೆ. ಇಂಥ ಒಂದು ಬಿಕ್ಕಟ್ಟಿನ ಸಮಯದಲ್ಲಿ ಸ್ನೇಹಶೀಲ ಮಾರ್ಟಿನ್‌ಸನ್ ವಿಶೇಷವಾದ ಮಾಧ್ಯಮವನ್ನು ಅನುಸರಿಸುತ್ತಿದ್ದಾರೆ. ಬುಷ್ ಖರ್ಚು ಮಾಡಿರುವ ಹಣದ ಹತ್ತನೆ ಒಂದರಷ್ಟಕ್ಕಿಂತಲೂ ಕಡಿಮೆಹಣವನ್ನು ಮಾರ್ಟಿನ್‌ಸನ್ ಖರ್ಚು ಮಾಡಿದ್ದಾರೆ. ಈತ ಪಾಕಿಸ್ತಾನ ಮತ್ತು ಆಫ್ಘಾನಿಸ್ತಾನದಲ್ಲಿರುವ ಸಂಪರ್ಕರಹಿತ ಪ್ರದೇಶಗಳಲ್ಲಿ ಶಾಲೆಗಳನ್ನು ಕಟ್ಟುತ್ತಿದ್ದಾರೆ. ಈ ಕೆಲಸದಲ್ಲಿ ಮುಸ್ಲಿಂ ಗುರುಗಳು ತುಂಬ ನೆರವಾಗುತ್ತಾರೆ. ಮಾರ್ಟಿನ್‌ಸನ್ ಈಗ ಓರ್ವ ದಂತಕಥೆಯಾಗಿದ್ದಾರೆ. ಅಮೇರಿಕಾದಲ್ಲಿ ಅವರ ಕೆಲಸವು ಸ್ಪಂದನ ಉಂಟುಮಾಡಿದೆ. ಅವರು ತಮ್ಮ ಶಾಲೆಗಳ ಬಗ್ಗೆ ಬರೆದಿರುವ 'ಥ್ರೀ ಕಪ್ಸ್ ಆಫ್ ಟೀ' ಎಂಬ ಪುಸ್ತಕ ೨೦೦೬ ರಲ್ಲಿ ಪ್ರಕಟಗೊಂಡಿತು. ಆ ಪುಸ್ತಕದ ಬಗ್ಗೆ ಯಾವ ಪತ್ರಿಕೆಯೂ ವಿಮರ್ಶೆ ಮಾಡಲು ಸಿದ್ಧವಿರಲಿಲ್ಲ. ಆ ಪುಸ್ತಕದ ಬಗ್ಗೆ ಬಾಯಿಂದ ಬಾಯಿಗೆ ಪ್ರಚಾರವಾದ ಮಾತುಗಳಿಂದ ಆ ಪುಸ್ತಕ ಈಗ ಮಾರುಕಟ್ಟೆಯಲ್ಲಿ ಮೊದಲನೆಯ ಸ್ಥಾನ ಪಡೆದಿದೆ. ೧೯೯೩ರಲ್ಲಿ ಮಾರ್ಟಿನ್‌ಸನ್ ಹಿಮಾಲಯದಲ್ಲಿಯ ಕೆ–ಟು ಪರ್ವತವನ್ನು ಹತ್ತುವಾಗ ಜಾರಿ ಬಿದ್ದರು. ಆಗ ಅತ್ಯಂತ ದುರ್ಬಲರಾಗಿದ್ದ ಅವರಿಗೆ ಹತ್ತಿರದ ಬಡ ಮುಸ್ಲಿಂ ರೈತರ ಗ್ರಾಮವು ಎಲ್ಲ ಉಪಚಾರವನ್ನು ಮಾಡಿತು. ಅವರ ಸೇವೆಗೆ ಕೃತಜ್ಞತೆಯನ್ನು ಸಲ್ಲಿಸುವುದಕ್ಕಾಗಿ ಆ ಗ್ರಾಮದಲ್ಲಿ ಶಾಲೆಯನ್ನು ಕಟ್ಟಿಕೊಡುವುದಾಗಿ ಮಾರ್ಟಿನ್‌ಸನ್ ಮಾತು ಕೊಟ್ಟರು. ಅಗತ್ಯವಾದ ಹಣ ಸಂಗ್ರಹಿಸುವುದು ಕನಸಿನ ಮಾತಾಗಿತ್ತು. ಅವರು ೫೮೦ ಕಾಗದಗಳನ್ನು ಧನಸಹಾಯ ಕೋರಿ ಬರೆದರು. ಆಗ ಒಂದು ಚೆಕ್ ಬಂತು. ಆ ಹಣ ಸಾಲದಾಯಿತು. ಪರ್ವತ ಹತ್ತಲು ಉಪಯೋಗಿಸುವ ತಮ್ಮ ಪ್ರೀತಿಯ ಉಪಕರಣಗಳನ್ನು ಮತ್ತು ಕಾರನ್ನು ಮಾರಿದರು. ಅಂತೂ ಶಾಲಾ ಕಟ್ಟಡದ ಕೆಲಸ ಮುಗಿಯಿತು. ಇಂಥದೇ ಯೋಜನೆಗಳನ್ನು ಹಾಕಿಕೊಂಡು ಮಾರ್ಟಿನ್‌ಸನ್ ಮುಂದುವರೆದರು. ಅವರ ಬೆಂಬಲಕ್ಕೆ 'ಸೆಂಟ್ರಲ್ ಏಷಿಯಾ ಇನ್ಸಿಟ್ಯೂಟ್' ಬಂದಿತು. ಈಗ ಅದರ ಸಹಾಯದಿಂದ ೨೪ ಶಾಲೆಗಳನ್ನು ನಡೆಸುತ್ತಿದ್ದಾರೆ. ಅವರ ದೃಷ್ಟಿ ಬಾಲಕಿಯರ ಶಿಕ್ಷಣದ ಮೇಲೆ ಕೇಂದ್ರಿತವಾಗಿದೆ. ವಿಶೇಷ ಸಂಗತಿಯೇನೆಂದರೆ ತಾಲಿಬಾನಿಗಳು ಅವರ ಶಾಲೆಯ ಸುದ್ದಿಗೆ ಬಂದಿಲ್ಲ. ಒಂದು ಸಲ ದಾಳಿ ಮಾಡಲು ಬಂದಿದ್ದ ತಾಲಿಬಾನಿಗಳು "ಈ ಶಾಲೆ ನಮ್ಮದೆಂದು" ಹೇಳಿಕೊಳ್ಳುತ್ತಾ ಅದಕ್ಕೆ ಯಾವ ಧಕ್ಕೆಯನ್ನೂ ಮಾಡದೆ ಹಿಂದಿರುಗಿದರು. ಮಾರ್ಟಿನ್‌ಸನ್ ಅನೇಕ ಕಷ್ಟಗಳನ್ನು ಎದುರಿಸಿದ್ದಾರೆ. ಒಮ್ಮೆ ಅವರನ್ನು ಪಾಕಿಸ್ತಾನದ ವಜರಿಸ್ತಾನ್ ಪ್ರದೇಶಕ್ಕೆ ಎಂಟು ದಿನಗಳ ವರೆಗೆ ಅಪಹರಿಸಿಕೊಂಡು

....೨೯ನೇ ಪುಟ ನೋಡಿ

ಖಾದಿಯ ತಾತ್ವಿಕ ಸಿದ್ಧಾಂತ

– ಗುರುದಯಾಳ್ ಮಲ್ಲಿಕ್

(ಸ್ವಾತಂತ್ರ್ಯೋತ್ಸವದ ಸಂದರ್ಭದಲ್ಲಿ ಭಾರತೀಯರೆಲ್ಲರು ಓದಲೇ ಬೇಕಾದ ಲೇಖನವಿದು)

ಪ್ರತಿಯೊಂದು ರಾಷ್ಟ್ರವೂ ಜೀವನದ ಬಗ್ಗೆ ತನ್ನದೇ ಜೀವನ ಸಿದ್ಧಾಂತವನ್ನು ಹೊಂದಿರುತ್ತದೆ. ಅನೇಕ ಬಾರಿ ಅದನ್ನು ಒಂದು ಸಂಕೇತದ ರೂಪದಲ್ಲಿ ಸಂಕ್ಷೇಪಿಸಲಾಗುತ್ತದೆ. ವಿಚಾರದಲ್ಲಿ ಅಂಥ ಪದ್ಧತಿಗಳ ಸಾಲೇ ಇದೆ. ಉದಾಹರಣೆಗೆ, ಅಗ್ನಿಯ ತಾತ್ವಿಕ ಸಿದ್ಧಾಂತ, ಕೊಳಲಿನ ತಾತ್ವಿಕ ಸಿದ್ಧಾಂತ, ಕಮಲದ ತಾತ್ವಿಕ ಸಿದ್ಧಾಂತ, ಗೀತೆಯ ತಾತ್ವಿಕ ಸಿದ್ಧಾಂತ, ಶಿಲುಬೆಯ ತಾತ್ವಿಕ ಸಿದ್ಧಾಂತ, ಬಿದಿಗೆ ಚಂದ್ರನ ತಾತ್ವಿಕ ಸಿದ್ಧಾಂತ ಇತ್ಯಾದಿ. ಈ ಎಲ್ಲ ವಿವಿಧ ಸಿದ್ಧಾಂತಗಳಲ್ಲಿ ಒಂದು ಸಾಮಾನ್ಯವಾದ ದೃಷ್ಟಿಕೋನವಿದೆ. ಅದು 'ವರ್ತುಲಾಕಾರದ' ಸರಳತೆಯ ಮೇಲೆ ಕೊಡಲಾದ ಒತ್ತು. ಜೀವನ ಸಿದ್ಧಾಂತದ ಈ ಪಾರ್ಶ್ವವೇ ಖಾದಿಯ ಸಿದ್ಧಾಂತವಾಗಿದೆ.

ಆಧುನಿಕ ಯುಗದಲ್ಲಿ ಗಾಂಧೀಜಿ ಈ ವಿಶೇಷ ಸಿದ್ಧಾಂತ ಮಾರ್ಗದ ಪ್ರಮುಖ ವಾಗ್ಗೇಯಕಾರ ಹಾಗೂ ಉದಾಹರಣೆಯಾಗಿದ್ದರು. ಗಾಂಧೀಜಿ ಮುಖ್ಯವಾಗಿ ತಮ್ಮ ಕಾಲದ ಸಂಕೀರ್ಣತೆಗಳು ಮತ್ತು ಭ್ರಮೆಗಳ ಒತ್ತಡದ ಕಾರಣದಿಂದಾಗಿ ಅದನ್ನು ಸ್ವೀಕರಿಸಿದರು.

ಖಾದಿ ಏನನ್ನು ಪ್ರತಿನಿಧಿಸುತ್ತದೆ? ಈ ಪ್ರಶ್ನೆಗೆ ಉತ್ತರ ಕೊಡುವ ಅತ್ಯುತ್ತಮ ಮಾರ್ಗ, ಖಾದಿ ಯಾವ–ಯಾವ ಮಹತ್ವದ ಸಂಗತಿಗಳನ್ನು ಪ್ರತಿನಿಧಿಸುವುದಿಲ್ಲ ಎಂಬುದನ್ನು ಹೊಡೆದು ಹಾಕುತ್ತಾ ಹೋಗುವುದು. ನಿಜವಾದ ಖಾದಿ ಕೆಲವು ಮೌಲ್ಯಗಳನ್ನು ಪ್ರತಿನಿಧಿಸುತ್ತದೆ. ತನ್ನ ಸ್ವಧರ್ಮದ ಆಚರಣೆಗಾಗಿ ಎಷ್ಟು ಅಗತ್ಯವೋ ಅಷ್ಟನ್ನು ಮಾತ್ರ ಹೊಂದಬೇಕೆಂಬುದು ಮೊದಲನೆಯ ಮೌಲ್ಯ; ಆದಾಯದ ಬೇರೆ ಮೂಲಗಳಿದ್ದಾಗ್ಯೂ ತನ್ನ ಪರಿಶ್ರಮದ ಬೆವರಿನ ಮೂಲಕ ಧನ ಸಂಪಾದಿಸುವುದು ಎರಡನೆಯ ಮೌಲ್ಯ; ಬೌದ್ಧಿಕ ಪ್ರಾಮಾಣಿಕತೆ ಮೂರನೆಯ ಮೌಲ್ಯ; ಸ್ವಯಂ ಪ್ರೇರಿತ ಆಧ್ಯಾತ್ಮಿಕತೆ ನಾಲ್ಕನೆಯ ಮೌಲ್ಯ; ಬಾಹ್ಯದಲ್ಲಿ ವಿರೋಧಾತ್ಮಕವಾಗಿ ಕಂಡರೂ ದೈವೀಶಾಸನದ ಪರಿಪೂರ್ಣ ನ್ಯಾಯದಲ್ಲಿ ಅಚಲವಾದ ನಂಬಿಕೆ ಐದನೆಯ ಮೌಲ್ಯ. ಗಾಂಧೀಜಿಯವರ ಜೀವನ ಈ ಮೌಲ್ಯಗಳ ಆಚರಣೆಗಾಗಿ ಅನಂತ ಪ್ರಯತ್ನವಾಗಿತ್ತು. ಅವರು ಚರಕವನ್ನು ಹೊಂದಿದ್ದರು. ಅವರ ಪ್ರಾಮಾಣಿಕತೆಯಂತೂ ಪ್ರಶ್ನಾತೀತವಾದುದಾಗಿತ್ತು. ಆದರೆ ಜನರು ಅವರಲ್ಲಿದ್ದ ವೈರುಧ್ಯಗಳನ್ನು ತಪ್ಪಾಗಿ ಭಾವಿಸಿದ್ದರು. ಅವರು ತಮ್ಮ ಸತ್ಯದ ಪ್ರಯೋಗಶಾಲೆಯಲ್ಲಿ ನಿನ್ನೆಯ ಅಸತ್ಯವನ್ನು ಕೈಬಿಟ್ಟು ಇಂದಿನ ಸತ್ಯವನ್ನು ಸ್ವೀಕರಿಸುತ್ತಿದ್ದರು. ಅವರ ರಾಮ ಅಯೋಧ್ಯೆಯ ರಾಮನೂ ಅಲ್ಲ, ಹಿಂದೂಗಳ ರಾಮನೂ ಅಲ್ಲ; ಅವರ ರಾಮ ಎಲ್ಲರವನು, ಎಲ್ಲರಿಗಾಗಿರುವವನು, ಎಲ್ಲರಲ್ಲಿರುವವನು. ತಮ್ಮ ಸುತ್ತಲೂ ಒಳ್ಳೆಯದಲ್ಲದಿರುವಂಥದಿದ್ದರೂ ಸಾತ್ವಿಕ ಶಕ್ತಿಯಲ್ಲಿಯ ಅವರ ನಂಬಿಕೆ ಎಲ್ಲೆಲ್ಲಿಯೂ ವಾಸುದೇವನೇ ಇದ್ದಾನೆ ಎಂದು ಸಾರುವಷ್ಟರ ಮಟ್ಟಿಗೆ ದೃಢವಾಗಿತ್ತು. ಒಂದು ಸಲ

ಪ್ರಧಾನಿ ಪಂಡಿತ ಜವಾಹರಲಾಲ್ ನೆಹರೂ ತಮಗೆ ಸ್ಫುರಿಸಿದ ಸೈದ್ಧಾಂತಿಕ ಪ್ರೇರಣೆಯಿಂದ ಕೈಯಿಂದ ನೂತ ಮತ್ತು ಕೈಯಿಂದ ನೇಯ್ದ ಬಟ್ಟೆ ಖಾದಿಯನ್ನು "ಸ್ವಾತಂತ್ರ್ಯದ ಉಡುಪು" ಎಂದು ಬಣ್ಣಿಸಿದರು. ಆದರೆ ಇಂದು ಆ ಉಡುಪು ಸಹೋದರರ ರಕ್ತಪಾತದಿಂದ ಕಲಂಕಿತವಾಗಿದೆ. ಖಾದಿಯನ್ನು ಮಾನವ ಜನಾಂಗದ ಸೇವೆಯ ಸರಳ, ಪ್ರಾಮಾಣಿಕ, ಕಷ್ಟದಾಯಕ, ಶ್ರಮದಾಯಕ, ಆಧ್ಯಾತ್ಮಿಕ ಮತ್ತು ಪರಿಶುದ್ಧ ಜೀವನದ ಉಡುಪು ಎಂದು ಕರೆಯಬಹುದು. ಸಂಕ್ಷಿಪ್ತವಾಗಿ, ಖಾದಿಯು ಸಮಗ್ರ ಜೀವನದ ಉಡುಪೇ ಆಗಿದೆ. ನಮ್ಮ ಇಂದಿನ ಕೃತಕ, ವಿಘಟಿತ, ದುರಭಿಮಾನದ, ಯಾಂತ್ರಿಕ, ಹಣದ ಹುಚ್ಚಿನ ನಾಗರಿಕತೆಯು ಇಂದಲ್ಲ-ನಾಳೆ ಬದಲಾಗಲೇ ಬೇಕು. ಆಗ ವ್ಯಕ್ತಿಗತ ಜೀವನದ ಹಾಗೂ ಸಮೂಹ ಜೀವನದ ಸಂಕೀರ್ಣ ಸಮಸ್ಯೆಗಳನ್ನು ಜಟಿಲತೆಗಳನ್ನು ಪರಿಹರಿಸುವಲ್ಲಿ ಖಾದಿಯ ತಾತ್ವಿಕ ಸಿದ್ಧಾಂತವನ್ನು ಮಾನವ ಕುಲವು ಶ್ರದ್ಧಾಪೂರ್ವಕವಾಗಿಯೂ, ಬುದ್ಧಿಪೂರ್ವಕವಾಗಿಯೂ ಅಂಗೀಕರಿಸುವ ಘಳಿಗೆ ಬರುತ್ತದೆ. ಏಕೆಂದರೆ ಖಾದಿಯ ಸಿದ್ಧಾಂತ ಜೀವನ ಸಿದ್ಧಾಂತವೇ ಆಗಿದೆ. *– ಅನು : ಸು.ಕೌ*

೨೭ನೇ ಪುಟದಿಂದ....

* * *

ಹೋಗಲಾಗಿತ್ತು. ಕೆಲವು ಶಾಲೆಗಳ ನಿರ್ಮಾಣ ಅಫ್ಘಾನಿಸ್ತಾನ ಅಥವಾ ಪಾಕಿಸ್ತಾನದಲ್ಲಿಯ ಪರಿಸ್ಥಿತಿಯನ್ನು ಬದಲಾಯಿಸುತ್ತದೆಂಬುದು ಬಾಲಿಶವೆಂದೆನಿಸಬಹುದು. ಆದರೆ ತಾಲಿಬಾನಿಗಳು ತಮಗೆ ಬೇಕಾದ ಸ್ವಯಂ ಸೇವಕರನ್ನು ಬಡ ಮತ್ತು ನಿರಕ್ಷರ ಜನರಿಂದಲೆ ಸಂಘಟಿಸುತ್ತಾರೆಂಬುದನ್ನು ಮಾರ್ಟಿನ್‌ಸನ್ ಮನಗಂಡಿದ್ದಾರೆ. ಆದ್ದರಿಂದ ಅಫ್ಘನಿಸ್ತಾನದಲ್ಲಿ ಬಾಂಬ್‌ಗಳ ಬದಲಾಗಿ ಪುಸ್ತಕಗಳು ಬದಲಾವಣೆ ತರಬಲ್ಲವೆಂದು ಭಾವಿಸಿದ್ದಾರೆ. ಅಮೇರಿಕಾ ಅಫ್ಘಾನಿಸ್ತಾನದ ಮೇಲೆ ಹಾರಿ ಬಿಡುವ ಒಂದು ಕ್ಷಿಪಣಿಯ ಬೆಲೆ ಐದು ಲಕ್ಷ ಡಾಲರ್‌ಗಳಷ್ಟಾಗುತ್ತದೆ. ಈ ಹಣದಿಂದ ಇಪ್ಪತ್ತಕ್ಕೂ ಹೆಚ್ಚು ಶಾಲೆಗಳನ್ನು ಕಟ್ಟಬಹುದು. ಮುಂದೆ ಈ ಶಾಲೆಗಳೇ ತಾಲಿಬಾನರನ್ನು ಉಚ್ಚಾಟಿಸಲು ಬಾಂಬ್‌ಗಳಿಗಿಂತ ಹೆಚ್ಚು ಪರಿಣಾಮಕಾರಿಯಾಗಿ ಕೆಲಸ ಮಾಡಬಹುದು. ಅಫ್ಘಾನಿಸ್ತಾನದಲ್ಲಿಯ ಸಂಘರ್ಷವನ್ನು ಬಾಂಬ್‌ಗಳಿಂದಲ್ಲ ಪುಸ್ತಕಗಳಿಂದ ಗೆಲ್ಲಬಹುದು. ಶಿಕ್ಷಣದ ಬಗ್ಗೆ ಇರುವ ಅಲ್ಲಿಯ ಜನರ ಬಾಯಾರಿಕೆ ಸುಸ್ಪಷ್ಟವಾಗಿಯೆ ಇದೆ ಎಂದು ಸೈನ್ಯಾಧಿಕಾರಿ ಕ್ರಿಸ್ಟೋಫರ್ ಕೋಲೆಂಡ ಹೇಳಿರುವುದು ಅತಿಶಯೋಕ್ತಿಯೇನಲ್ಲ.

* * *

ಸನ್ಮಾನ್ಯರಿಂದ

ತಮ್ಮ ಪತ್ರ ತಲುಪಿದೆ. ನಾನು ಒಂದೂವರೆ ತಿಂಗಳು ಊರಿಗೆ ಹೋಗಿ ಬಂದೆ. ತಮ್ಮ ಹೊಸ ಕೆಲಸಗಳು ಸರಾಗವಾಗಿ ನಡೆಯಲೆಂಬ ಹಾರೈಕೆಯೊಂದಿಗೆ ಕಿರುಕಾಣಿಕೆಯೊಡನೆ ಅಭಿನಂದನೆಗಳು. ಜನಪದ ವಿಚಾರ ತಲುಪುತ್ತಾಯಿದೆ.

– ಸುನಂದಾ.ಕೆ.ಶೆಟ್ಟಿ, ಮುಂಬೈ

ಜನಪದ ಸೇವಾ ಟ್ರಸ್ಟ್ ಸಮಾಚಾರ

ಈಗ ತಮ್ಮ ಕೈಯಲ್ಲಿರುವ ಜನಪದ ವಿಚಾರವು ತನ್ನ ಉದ್ದೇಶಿತ ಧ್ಯೇಯಗಳ ಸಾಧನೆಯ ಎಂಟು ವರ್ಷಗಳನ್ನು ಮುಗಿಸಿ ಒಂಭತ್ತನೆಯ ವರ್ಷದಲ್ಲಿ ಪಾದಾರ್ಪಣೆ ಮಾಡುತ್ತಿರುವ ಸಮಯದಲ್ಲಿ ಮೊದಲನೆಯ ಸಂಚಿಕೆಯಾಗಿದೆ. ಈ ಪತ್ರಿಕೆಯು ಇದುವರೆಗೆ ನಡೆದುಕೊಂಡು ಬರಲು ಸಾಧ್ಯವಾಗಿರುವುದಕ್ಕೆ ಚಂದಾದಾರರ ಹಾಗೂ ಜಾಹೀರಾತುದಾರರ ಬೆಂಬಲ ಹಾಗೂ ಓದುಗರ ಪ್ರೀತಿ, ವಿಶ್ವಾಸಗಳೆ ಕಾರಣವಾಗಿವೆ. ಈ ಸಮಯದಲ್ಲಿ ಅವರೆಲ್ಲರನ್ನು ಜನಪದ ವಿಚಾರವು ಕೃತಜ್ಞತೆಯಿಂದ ಸ್ಮರಿಸುತ್ತದಲ್ಲದೆ ಮುಂದಿನ ವರ್ಷಗಳಲ್ಲಿ ಅವರೆಲ್ಲರಿಂದ ಹೆಚ್ಚಿನ ಪ್ರೋತ್ಸಾಹವನ್ನು ಬಯಸುತ್ತದೆ.

ಹೊಸ ಜೀವನ ದಾರಿ ಕೇಂದ್ರದಲ್ಲಿ ಜುಲೈ ಐದು ಮತ್ತು ಆರರಂದು ಸಮಾನ ಮನಸ್ಕರ ಚಿಂತನಾ ಶಿಬಿರವನ್ನು ನಡೆಸಲಾಯಿತು. ಈ ಸಭೆಯಲ್ಲಿ ಹೊಸ ಜೀವನ ದಾರಿಯ ಧ್ಯೇಯೋದ್ದೇಶಗಳ ನೆರವೇರಿಕೆಗಾಗಿ ಕೈಗೊಳ್ಳಬಹುದಾದ ಹಲವಾರು ಉಪಯುಕ್ತಕರವಾದ ಸಲಹೆಗಳು ಬೆಳಕಿಗೆ ಬಂದವು. ಹಿರಿಯ ನಾಗರಿಗಕರ ಸಭೆಗೆ ತಾಲ್ಲೂಕು ತಹಶೀಲ್ದಾರರು ಬಂದು ಪೌಷ್ಠಿಕ ಆಹಾರ ವಿತರಣಾ ಕಾರ್ಯಕ್ರಮದ ಉದ್ಘಾಟನೆಯನ್ನು ಮಾಡಿದರು. ಈ ಕಾರ್ಯಕ್ರಮದಲ್ಲಿ ಪ್ರಾರಂಭಕ್ಕೆ ಮೂವತ್ತು ಜನ ಹಿರಿಯರನ್ನು ಆಯ್ಕೆ ಮಾಡಿಕೊಳ್ಳಲಾಗಿದೆ. ಇವರೆಲ್ಲರಿಗೆ ಹದಿನೈದು ದಿನಗಳಿಗೊಮ್ಮೆ ಪೌಷ್ಠಿಕ ಆಹಾರವನ್ನು ಕೊಡುವ ಯೋಚನೆಯಿದೆ. ಆರ್ಥಿಕ ಬೆಂಬಲ ಒದಗಿ ಬಂದಲ್ಲಿ ಇದನ್ನು ವಾರಕ್ಕೊಮ್ಮೆ ನಡೆಸಬೇಕೆಂಬ ಯೋಚನೆಯಿದೆ. ಒಂದು ಸಲದ ಈ ಕಾರ್ಯಕ್ರಮಕ್ಕೆ ಸುಮಾರು ಮೂರು ನೂರು ರೂಗಳಷ್ಟು ಖರ್ಚಾಗುವ ಅಂದಾಜಿದೆ. ಹಿರಿಯ ನಾಗರಿಕರ ಹಿತಚಿಂತನೆಯಲ್ಲಿ ಆಸಕ್ತರಾಗಿರುವವರು ಒಂದು ಸಲದ ಖರ್ಚನ್ನು ಅಂದರೆ ಮೂರು ನೂರು ರೂಗಳನ್ನು ತಮ್ಮ ಹಿರಿಯರ ಹೆಸರಿನಲ್ಲಿ ಕಳುಹಿಸಿಕೊಡುವುದರ ಮೂಲಕ ಈ ಕಾರ್ಯಕ್ರಮ ಚೆನ್ನಾಗಿ ನಡೆಯುವಂತೆ ಮಾಡಬೇಕಾಗಿ ವಿನಂತಿ. ಈ ಕಾರ್ಯಕ್ರಮಕ್ಕೆ ಮಾರ್ಗದರ್ಶಕರಾಗಿ ಓರ್ವ ಆಯುರ್ವೇದ ವೈದ್ಯರ ಸೇವೆಯನ್ನು ಪಡೆಯಲಾಗುವುದು.


೨೦೦೮ ಜುಲೈ ಮಾಹೆಯ ದಾನಿಗಳು

೧. ಶ್ರೀಮತಿ ಸುನಂದಾ.ಕೆ.ಶೆಟ್ಟಿ, ಮುಂಬೈ
೨. ಶ್ರೀ ಬಿ. ನಾಗಪ್ಪ, ದಾವಣಗೆರೆ
೩. ಶ್ರೀಮತಿ ಹೆಚ್.ಎಸ್. ಅಪರ್ಣ, ಮೈಸೂರು
೪. ಶ್ರೀ ಬಿ.ಟಿ.ಎನ್. ಸ್ವಾಮಿ, ಬೆಂಗಳೂರು
೫. ಶ್ರೀಮತಿ ಕೃಷ್ಣಸ್ವಾಮಿ, ಮೇಲುಕೋಟೆ
೬. ಡಾ.ರಾಧಾಕೃಷ್ಣ, ತಿಪಟೂರು
೭. ಶ್ರೀಮತಿ ಲಕ್ಷ್ಮಿ ರಾಮಪ್ರಸಾದ್, ಮೈಸೂರು
೮. ಶ್ರೀ ಕೆ.ರಮೇಶ್‌ರಾವ್, ಮಂಗಳೂರು
೯. ಶ್ರೀ ಎಂ.ಕೆ. ರಾಮಚಂದ್ರಶಾಸ್ತ್ರಿ, ಮೈಸೂರು ಮತ್ತು

ಸಂಸ್ಥೆಯ ಎಲ್ಲಾ ಮಾಹೆಯಾನ ದಾನಿಗಳು.

ಜನಪದ ನಿಲಯದ ಅಂತರಂಗದಲ್ಲಿ . . . ೫೭

– *ಸುರೇಂದ್ರ ಕೌಲಗಿ*



ಆಗಸ್ಟ್ ತಿಂಗಳು ದೇಶದ ಇತಿಹಾಸದಲ್ಲಿ ಸುವರ್ಣಾಕ್ಷರದಿಂದ ಬರೆದಿಡುವ ದಿನವಾಗಿದೆ. ಆ ತಿಂಗಳು ಜಗತ್ತಿನ ಅನೇಕ ಮಹಾ ಪುರುಷರ ಜನ್ಮದಿನದ ತಿಂಗಳೂ ಆಗಿದೆ. ಐತಿಹಾಸಿಕ ತಿಂಗಳೂ ಆಗಿದೆ. ಅಂತೆಯೇ ಜನಪದ ಸೇವಾ ಟ್ರಸ್ಟಿನ ವಿಷಯದಲ್ಲೂ ಕೂಡ ಆಗಸ್ಟ್ ತಿಂಗಳು ಮಹತ್ವದ ತಿಂಗಳಾಗಿದೆ. ೧೯೬೦ ಆಗಸ್ಟ್ ೬ರಂದು ಜನಪದ ಸೇವಾ ಟ್ರಸ್ಟಿನ ಸ್ಥಾಪನೆಯಾಯಿತು. ಈ ವರ್ಷದ ಆಗಸ್ಟ್ ತಿಂಗಳಿನಲ್ಲಿ ಜನಪದ ಸೇವಾ ಟ್ರಸ್ಟ್ ತನ್ನ ನಲವತ್ತೆಂಟನೆ ವರ್ಷದ ಅವಧಿಯನ್ನು ಮುಗಿಸಿ ನಲವತ್ತೊಂಭತ್ತನೆ ವರ್ಷಕ್ಕೆ ಕಾಲಿಡುತ್ತಿದೆ. ಒಂದು ಸಂಸ್ಥೆಯು ಗ್ರಾಮಾಂತರ ಪ್ರದೇಶದಲ್ಲಿ ಸ್ಥಾಪಿತಗೊಂಡು ಹೊರಗಿನ ಯಾವುದೇ ಸಂಸ್ಥೆಯಿಂದ ಧನಸಹಾಯ ಪಡೆಯದೆ ಕೇವಲ ಸಮಾಜದ ಸದಸ್ಯರಿಂದ ಸಹಾಯ ಪಡೆಯುತ್ತ ಬೆಳೆದುಕೊಂಡು ಬಂದಿರುವುದು ಆಶ್ಚರ್ಯದ ಸಂಗತಿಯೆ ಅಥವಾ ಸಂತೋಷದ ಸಂಗತಿಯೆ ಎಂಬುದನ್ನು ಸಮಾಜವೇ ತೀರ್ಮಾನಿಸಿಕೊಳ್ಳಬೇಕು. ಈ ನಲವತ್ತೊಂಭತ್ತು ವರ್ಷಗಳಷ್ಟು ದೀರ್ಘ ಅವಧಿಯಲ್ಲಿ ಟ್ರಸ್ಟ್ ತನ್ನ ಸೇವಾಕಾರ್ಯಗಳನ್ನು ತಕ್ಕ ಮಟ್ಟಿಗೆ ಮಾಡಿಕೊಂಡು ಬಂದಿದ್ದರೆ ಅದಕ್ಕೆ ಟ್ರಸ್ಟಿಗೆ ಬೆಂಬಲಿಗರಾಗಿ ನಿಂತ ನೂರಾರು ದಾನಿಗಳು, ಅಭಿಮಾನಿಗಳು ಹಾಗೂ ಕಾರ್ಯಕರ್ತರು ಕಾರಣವೆಂದು ನಿಸ್ಸಂದೇಹವಾಗಿ ಹೇಳಬಹುದು. ಮುಂದಿನ ವರ್ಷದ ಆಗಸ್ಟ್ ತಿಂಗಳ ಹೊತ್ತಿಗೆ ಟ್ರಸ್ಟ್ ತನ್ನ ಜೀವಿತದ ಐವತ್ತನೆ ವರ್ಷಕ್ಕೆ ಹೆಜ್ಜೆ ಇಡಲಿದೆ. ಜನಪದ ಸೇವಾ ಟ್ರಸ್ಟಿನ ಬಗ್ಗೆ ಒಂದು ವಿಶೇಷವಾದ ಸಂಗತಿಯೇನೆಂದರೆ ಟ್ರಸ್ಟ್ ಸಾರ್ವಜನಿಕ ಸಂಸ್ಥೆಯಾಗಿ ಸ್ಥಾಪಿತಗೊಂಡು ರಿಜಿಸ್ಟರ್ ಆಗಿದ್ದರೂ ಕೂಡ ಅದು ಪ್ರಧಾನವಾಗಿ ಒಂದು ಕುಟುಂಬದ ಸಕ್ರಿಯ ಪರಿಶ್ರಮದಿಂದ ನಡೆಯುತ್ತಿರುವುದು. ಆದರೆ ಸಂಸ್ಥೆಯು ಕುಟುಂಬದ್ದಲ್ಲ. ಈ ಕುಟುಂಬವು ಕೇವಲ ನಿಮಿತ್ತ ಮಾತ್ರ, ಹೊರಗಿನ ಅನೇಕ ಜನರಿಗೆ ಈ ವಿಷಯದಲ್ಲಿ ಭ್ರಮೆ, ಗೊಂದಲ, ತಪ್ಪು ತಿಳುವಳಿಕೆ ಆಗಿರಲು ಸಾಧ್ಯವಿದೆ. ಅನೇಕ ಜನರು ಟ್ರಸ್ಟಿನ ಹೆಸರಿನಲ್ಲಿರುವ ಸ್ಥಿರ ಸ್ವತ್ತುಗಳು ಈ ಕುಟುಂಬದ್ದೆ ಎಂದು ತಪ್ಪಾಗಿ ಭಾವಿಸುವಷ್ಟು ಅವರು ಗೊಂದಲ ಮಾಡಿಕೊಂಡಿದ್ದಾರೆ. ನಿಜ ಸಂಗತಿಯೇನೆಂದರೆ ಎಲ್ಲ ಸ್ಥಾವರವು ಟ್ರಸ್ಟಿನ ಹೆಸರಿನಲ್ಲಿ ಕಾನೂನುಬದ್ಧವಾಗಿದೆ. ಸಂಗ್ರಹವಾಗಿರುವ ಮತ್ತು ಸಂಗ್ರಹವಾಗುತ್ತಿರುವ ಹಣವು ಸಹ ಟ್ರಸ್ಟಿನ ಹೆಸರಿನಲ್ಲಿದೆ. ಎಷ್ಟೋ ಜನರಿಗೆ ಸಮಯ ಸಂದರ್ಭ ಬಂದಾಗ ಈ ಆಸ್ತಿ, ಈ ಪದಾರ್ಥ ನಮ್ಮದಲ್ಲ ಟ್ರಸ್ಟಿನದೆಂದು ಹೇಳಿದಾಗ ಅವರಿಗೆ ಆಶ್ಚರ್ಯವಾಗುತ್ತದೆ. ಏಕೆಂದರೆ ಟ್ರಸ್ಟಿನ ಸ್ಥಾಪಕ ಸದಸ್ಯರಾಗಿ ಮತ್ತು ಟ್ರಸ್ಟಿನ ಬೆಳವಣಿಗೆಯಲ್ಲಿ ನಲವತ್ತೊಂಭತ್ತು ವರ್ಷಗಳ ಕಾಲ ಹಗಲು-ರಾತ್ರಿ ನಿರಂತರವಾಗಿ ಸೇವೆ ಮಾಡಿಕೊಂಡು ಬಂದಿರುವ ಕುಟುಂಬವನ್ನು ಅವರು ನೋಡಿದಾಗ ಇದೆಲ್ಲವು ಅವರದಲ್ಲದೆ ಇರಲು ಸಾಧ್ಯವಿಲ್ಲ ಎಂಬ ಭ್ರಮೆಗೆ ಒಳಗಾಗಿರುತ್ತಾರೆ. ಈ ಭ್ರಮೆಯನ್ನು ನಿರಸನಗೊಳಿಸಿದಾಗ ಅವರಿಗೆ ಆಶ್ಚರ್ಯವಾಗುತ್ತದೆ. ಏಕೆಂದರೆ ಇನ್ನು ಬೇರೆ ಬೇರೆ ಸಂಸ್ಥೆಗಳಲ್ಲಿ ನಲವತ್ತೊಂಭತ್ತು ವರ್ಷಗಳ ಅವಧಿಯಲ್ಲಿ ಬಹಳಷ್ಟು ಏರು-ಪೇರುಗಳಾಗುತ್ತವೆ. ಆದರೆ ಟ್ರಸ್ಟಿನ ವಿಷಯದಲ್ಲಿ

ಹೀಗಾಗದೆ ಶಾಂತವಾಗಿ ಹರಿಯುವ ಕಾವೇರಿಯಂತೆ ಟ್ರಸ್ಟಿನ ಕಾರ್ಯಚಟುವಟಿಕೆಗಳು ನಡೆಯುತ್ತಿರುವುದನ್ನು ನೋಡಿದಾಗ ಟ್ರಸ್ಟಿನ ಈ ವೈಶಿಷ್ಟ್ಯತೆಯನ್ನು ನಂಬುವುದು ಕಷ್ಟವಾಗುತ್ತದೆ. ಆದರೂ ಇದು ನಿಜ. ಈ ಕುಟುಂಬದ ಮಟ್ಟಿಗೆ ಟ್ರಸ್ಟಿನ ಕೆಲವು ಸೌಲಭ್ಯಗಳು ಮಾತ್ರ ಉಪಯೋಗಕ್ಕೆ ಒಳಪಟ್ಟಿವಿಯೆ ಹೊರತು ಅವೂ ಕುಟುಂಬದ್ದಲ್ಲ. ಹೀಗೆ ಮೇಲ್ನೋಟಕ್ಕೆ ಟ್ರಸ್ಟ್ ಕುಟುಂಬದ್ದಾಗಿದ್ದರೂ ಅದು ಒಳನೋಟದಲ್ಲಿ ಕುಟುಂಬದ್ದಾಗಿಲ್ಲ. ಹಾಗೆಯೇ ಕುಟುಂಬವು ಟ್ರಸ್ಟಿನದ್ದಾಗಿದ್ದರೂ ಟ್ರಸ್ಟಿನದಲ್ಲ. ಇದು ಜನಪದ ಸೇವಾ ಟ್ರಸ್ಟಿನ ವಿಶೇಷತೆ. ಈ ಸಂಗತಿಯನ್ನು ಟ್ರಸ್ಟಿನ ವಾರ್ಷಿಕ ಸಭೆಗಳಲ್ಲೆಲ್ಲ ಘೋಷಿಸುತ್ತಾ ಬರಲಾಗಿದೆ. ಕುಟುಂಬದ ಹೆಸರಿನಲ್ಲಿ ಯಾವುದೇ ಚರ-ಸ್ಥಿರಾಸ್ತಿಯಾಗಲಿ ಇರುವುದಿಲ್ಲ. ಈ ವಿಷಯವನ್ನು ಯಾರೂ ಕೂಡ ಅಧಿಕೃತವಾಗಿ ಪ್ರಶ್ನಿಸುವುದಕ್ಕೆ ಸ್ವಾಗತವುಂಟು.

ಟ್ರಸ್ಟಿನೊಂದಿಗೆ ಕುಟುಂಬದ ಹೆಣಿಕೆ ಎಷ್ಟು ಮಾನವೀಯತೆಯಿಂದ ಕೂಡಿದೆ ಎಂದರೆ ಈಗ ಕುಟುಂಬದ ಮೂರನೇ ತಲೆಮಾರಿನವರು ಕೂಡ ಟ್ರಸ್ಟಿನ ಕಾರ್ಯಕ್ರಮದಲ್ಲಿ ಪ್ರತ್ಯಕ್ಷ ಹಾಗೂ ಪರೋಕ್ಷವಾಗಿ ಭಾಗವಹಿಸುತ್ತಿದ್ದಾರೆ. ಇನ್ನೊಂದು ವಿಶೇಷ ಸಂಗತಿಯೇನೆಂದರೆ ಟ್ರಸ್ಟ್‌ನೊಂದಿಗಿನ ಕುಟುಂಬದ ವ್ಯವಹಾರವೆಲ್ಲವು ಪಾರದರ್ಶಕವಾಗಿದೆ. ಕುಟುಂಬ ಮತ್ತು ಟ್ರಸ್ಟಿನ ಮಧ್ಯೆ ನಡೆಯುವ ಯಾವ ವ್ಯವಹಾರವೂ ಟ್ರಸ್ಟಿನ ಕಾರ್ಯಕರ್ತರಿಗೆ ತಿಳಿಯದೆ ಇಲ್ಲ. ಯಾವ ಗ್ರಾಮದಲ್ಲಿ ಟ್ರಸ್ಟ್ ಸ್ಥಾಪಿತವಾಗಿರುವುದೊ ಆ ಗ್ರಾಮದ ಜನರಿಗೂ ತಿಳಿಯದೆ ಇಲ್ಲ. ಗ್ರಾಮದ ಇಂದಿನ ಯುವ ಪೀಳಿಗೆಯೆಲ್ಲ ಒಂದಲ್ಲ ಒಂದು ರೀತಿಯಲ್ಲಿ ಟ್ರಸ್ಟಿನ ಸಂಬಂಧವನ್ನಿಟ್ಟುಕೊಂಡೆ ಬೆಳೆದುದಂಥದಾಗಿದೆ. ಟ್ರಸ್ಟ್ ಪ್ರಾರಂಭವಾದಾಗಿನಿಂದ ಇದುವರೆಗಿನ ಎಲ್ಲ ಮಹತ್ವದ ಸಂಗತಿಗಳು ಗ್ರಾಮಸ್ಥರಿಗೆ ತಿಳಿದಿವೆ. ಜನಪದ ನಿಲಯದ ಪ್ರವೇಶದ್ವಾರಕ್ಕೆ ಈ ನಲವತ್ತೊಂಭತ್ತು ವರ್ಷಗಳ ಅವಧಿಯಲ್ಲಿ ಒಂದು ದಿನವೂ ಬೀಗ ಹಾಕಿದುದಿಲ್ಲ. ಬೆಳಿಗ್ಗೆಯಿಂದ ರಾತ್ರಿವರೆಗೆ ಬಾಗಿಲು ತೆರೆದೇ ಇರುತ್ತದೆ. ನಿಲಯದ ಮುಂಬಾಗಿಲಿನಿಂದ ಪ್ರವೇಶಿಸಿ ಹಿತ್ತಲ ಬಾಗಿಲಿನಿಂದ ಯಾವ ಸಂಕೋಚವಿಲ್ಲದೆ ಹೊರ ಹೋಗಬಹುದು. ಟ್ರಸ್ಟಿನ ಆಶ್ರಯದಲ್ಲಿರುವ ಮಕ್ಕಳಿಗೆ ನಿಲಯದಲ್ಲಿ ಓಡಾಡುವ ಸ್ವಾತಂತ್ರ್ಯವಿರುತ್ತದೆ. ಆದ್ದರಿಂದ ಈ ನಿಲಯಕ್ಕೆ ಲೋಕನಾಯಕ ಜಯಪ್ರಕಾಶ್ ನಾರಾಯಣ್, ಆಚಾರ್ಯ ವಿನೋಬಾ ಭಾವೆಯವರಂಥ ದೇಶನಾಯಕರಿಂದ ಹಿಡಿದು ಗ್ರಾಮದ ಸಾಮಾನ್ಯ ವ್ಯಕ್ತಿಗಳಾದ ವೃದ್ಧೆ ಮಾಯಮ್ಮ ಮತ್ತು ಮದ್ಯವಸನಿ ಕುಮಾರನಂಥವರಿಗೂ ಮುಕ್ತ ದ್ವಾರದ ಪ್ರವೇಶವಿರುತ್ತದೆ.

ಈಗ ಟ್ರಸ್ಟ್ ಅಭಿವೃದ್ಧಿಯ ಯೋಜನೆಗಳನ್ನು ಹಾಕಿಕೊಳ್ಳುತ್ತಿದೆ. ಅವುಗಳಲ್ಲಿ ಮುಖ್ಯವಾದುದು ಈಗ್ಗೆ ಮೂವತ್ತು ವರ್ಷಗಳ ಹಿಂದೆ ನಿರ್ಮಾಣಗೊಂಡ ಕರುಣಾಗೃಹ ಕಟ್ಟಡದ ದುರಸ್ತಿ, ಸುಣ್ಣ-ಬಣ್ಣ ಮತ್ತು ಮಕ್ಕಳಿಗಾಗಿ ಹೆಚ್ಚುವರಿ ಮಂಚ ಮತ್ತು ಹಾಸಿಗೆಗಳು ಹಾಗೂ ಇತರ ಸೌಲಭ್ಯಗಳನ್ನು ಒದಗಿಸುವ ಯೋಜನೆ ಮುಖ್ಯವಾಗಿದೆ. ಇದಕ್ಕಾಗಿ ಕೊನೆಯ ಪಕ್ಷ ಮೊದಲ ಹಂತವಾಗಿ ಹತ್ತು ಲಕ್ಷ ರೂಗಳಾದರೂ ಬೇಕಾಗುತ್ತದೆ. ಕರುಣಾಗೃಹದ ಈ ಯೋಜನೆ ಕೈಗೂಡಬೇಕಾದರೆ ದಾನಿಗಳ ಸಹಾಯವೇ ಬಹಳ ಮುಖ್ಯವಾಗುತ್ತದೆ. ಟ್ರಸ್ಟಿಗೆ ಆದಾಯ ಇಲಾಖೆಯಿಂದ ೮೦ಜಿ ಎಂಬ ಆದಾಯ ತೆರಿಗೆಯ ಸೌಲಭ್ಯವು ಇಷ್ಟರಲ್ಲಿಯೇ ನವೀಕರಣಗೊಳ್ಳಲಿದೆ. ಹೆಚ್ಚಿನ ಮಾಹಿತಿಗಾಗಿ ಟ್ರಸ್ಟಿನ ಅಧ್ಯಕ್ಷರನ್ನು ಅಂಚೆಯ ಮೂಲಕವಾಗಲಿ, ದೂರವಾಣಿಯ ಮೂಲಕವಾಗಲಿ ಸಂಪರ್ಕಿಸಬಹುದು. ದಾನಿಗಳು ಮತ್ತು ಅಭಿಮಾನಿಗಳು ಟ್ರಸ್ಟಿನ ಸೇವಾ ತೇರನ್ನು ಮುಂದೆ ಎಳೆಯುವುದಕ್ಕೆ ಎಂದಿನಂತೆ ಕೈಜೋಡಿಸುವರೆಂದು ಆಶಿಸಲಾಗಿದೆ. (ಮುಂದುವರಿಯುವುದು ...)

ಬಾಂಧವ್ಯ

ಜನಪದ ವಿಚಾರವು ಚಂದಾದಾರರೊಂದಿಗಿನ ತನ್ನ ಬಾಂಧವ್ಯವನ್ನು ಸದಾ ಸ್ಮರಿಸುತ್ತದೆ.

ಶ್ರೀ ಎನ್.ಕೆ. ಕೌಲಗಿ,
ಮುಂಬೈ
ಶ್ರೀ ಜಿ.ಎಸ್. ಜಯದೇವ್,
ಚಾಮರಾಜನಗರ
ಶ್ರೀ ಕೆ. ರಘುರಾಮ್,
ಮೈಸೂರು

ಈ ಬಂಧುಗಳು ತಮ್ಮ ಚಂದಾ ನವೀಕರಿಸಿದ್ದಕ್ಕಾಗಿ ಹಾಗೂ ಪತ್ರಿಕೆಗೆ ಹೊಸದಾಗಿ ಚಂದಾದಾರರಾದ ಮಾನ್ಯ

ಪ್ರೊ. ಜಿ. ವೆಂಕಟಸುಬ್ಬಯ್ಯ,
ಬೆಂಗಳೂರು

ಶ್ರೀ ಬಿ.ಎಸ್. ಪುಟ್ಟಸ್ವಾಮಯ್ಯ,
ಬೆಂಗಳೂರು

ಶ್ರೀ ಜಿ.ಎಲ್. ಕುಮಾರ್,
ಬೆಂಗಳೂರು

ಇವರಿಗೆ ಕೃತಜ್ಞತೆಗಳು.

* * *

ಲೇಖನಗಳಲ್ಲಿಯ ವಿಚಾರಗಳಿಗೆ ಆಯಾ ಲೇಖಕರು ಹೊಣೆ *(–ಸಂಪಾದಕರು)*

ಮುಖಪುಟ ಚಿತ್ರ ಕೃಪೆ ಡೆಕ್ಕನ್‌ಹೆರಾಲ್ಡ್

KA / SK / MND / 470 / 2006-2008
Regd. no. KAR / KAN / 2000 / 3820

ತೆರೆದ-ಅಂಚೆ

ಶ್ರೀಮತಿ/ ಶ್ರೀ..

....

....

jANAPADA VICHARA - Kannada Monthly Digest Edited Printed and Published by Surendra Koulagi at Janapada Seva Trust Melkote, Dist- Mandya – 571431.Phone : 08236 – 299854, 316344 e-mail : janapada@yahoo.com Printed at Sanketh Mudrana, Melkote.